24-04-2000

ಮಂಜು ಮನೆ, ಬೆಂಗಳೂರು.                    ವರದಾಚಾರ್ಯರೊಡನೆ ಮತ್ತು ಕೆಲವರೊಡನೆ.

ಅಜ್ಜ – ಆನಂದಮಯ ಜೀವನಕ್ಕೆ ಹೋಗ್ಬೇಕು. ಅದಕ್ಕೆ ದಾರಿಗಳುಂಟು. ಜೀವನ ಎಂಬುದೊಂದು ಯಾತ್ರೆ ಅಲ್ವಾ. ಆ ಜೀವಾತ್ಮನು ಅಂತಿಮ ಗುರಿಯ ಕಡೆಗೆ ಹೋಗುವಂಥಾ ಯಾತ್ರೆ ಇದು. ಈ ಧರ್ಮ ಎಂಬುದು ಇಲ್ಲಿ ಇದೆ ಈಗ. ನಮ್ಮ ಸಿದ್ಧಾಂತ ಅದು. ಜೀವ + ಆತ್ಮ = ಜೀವಾತ್ಮ ಆಯ್ತಲ್ಲ. ಈ ಮಧ್ಯ ಭಾಗದಲ್ಲಿ ಏನಿದೆ ಅಂತ ನೋಡ್ಬೇಕು. ಧರ್ಮ ಎಂಬುದಕ್ಕೆ ಇನ್ನೊಂದು ಅರ್ಥವೇನು? ಕನ್ನಡದಲ್ಲಿ ಹೇಳುವಾಗ ಈ ಮನುಷ್ಯನಿಗೆ ಮಾತ್ರ ಒಂದು ಧರ್ಮ ಇರೋದಲ್ಲ. ಒಂದು ನದಿಗೂ ಒಂದು ಧರ್ಮವಿದೆ.

ವರದಾಚಾರ್ಯ – ಹೌದು, ಪ್ರತಿಯೊಂದಕ್ಕೂ ಧರ್ಮ ಉಂಟು.

ಅಜ್ಜ – ನದಿಯ ಧರ್ಮ ಯಾವ್ದು? ಹರಿಯುವಂಥಾದ್ದು. ಆ ಧರ್ಮ ಯಾವ್ದು? ಅಲ್ಲಿ ಒಂದು ಗುರಿಯುಂಟು. ಆ ಗುರಿಯನ್ನು ತಲುಪುವಂಥಾದ್ದು. ಈ ಹರಿಯುವಾಗ ಒಂದು ಧರ್ಮ ಇದೆ ಇಲ್ಲಿ. ಅದೇ ರೀತಿ ಜೀವಾತ್ಮನು ತನ್ನ ಜೀವನದಲ್ಲಿ ನಡೆಯುವಂಥಾ . . . ಶಬ್ದಗಳು ಬರೋದಿಲ್ಲ. ನಮಗೆ ಓದಿದ ವಿದ್ವತ್ ಇಲ್ಲದ ಕಾರಣ ಶಬ್ದಗಳು ಬರೋದಿಲ್ಲಪ್ಪಾ.

ಒಬ್ಬರು – ಇಂಗ್ಲೀಷ್‌ನಲ್ಲಿ ಇದಕ್ಕೆ Natural Law ಅಂತ ಹೇಳ್ತಾರೆ.

ಅಜ್ಜ – ಅಂದ್ರೆ.

ಒಬ್ಬರು – ಅಂದ್ರೆ ಅದು ಅದರ ಸ್ವಭಾವ.

ಅಜ್ಜ – ಹೌದು ಧರ್ಮ ಅಲ್ಲಿ ಇದೆ. ಆ ಜೀವಶಕ್ತಿಯು ತನ್ನ ಅಸ್ತಿತ್ವವನ್ನು ಕಳಕೊಳ್ಳುವಂಥಾದ್ದು. ಕರ್ಮದಿಂದ ಪರಿವರ್ತನೆ, ಜ್ಞಾನದಿಂದ ವಿಕಾಸ. ಹಾಗಾದ್ರೆ ಕಲಿಯುವಂಥಾದ್ದು ಇಲ್ಲೇ ಆಗ್ಬೇಕು ಕರ್ಮದಿಂದ. ಕರ್ಮದಿಂದ ಪರಿವರ್ತನೆ ಹೊಂದಿದಾಗ ಅದು ಜ್ಞಾನಕ್ಕೆ ಸಾಧನವಾಕ್ತದೆ. ಜ್ಞಾನದಲ್ಲಿ ಕರ್ಮವಿಲ್ಲ. ನಿಷ್ಕಾಮಕರ್ಮ, ಶರಣಾಗತಿ. ಅದು ನೋಡಿ ಜ್ಞಾನಕ್ಕೆ ಸಾಧನ. ಬಾಕೀ ಯಾವ ಕರ್ಮಗಳೂ ಆಗೋದಿಲ್ಲ.

ವರದಾಚಾರ್ಯ – ಕರ್ಮದಲ್ಲಿ ಜ್ಞಾನ ಬೇಕು.

ಅಜ್ಜ – ಕರ್ಮದಿಂದ ಪರಿವರ್ತನೆ. ಅಜ್ಞಾನಕ್ಕೆ ಅಲ್ಲಿ . . . ಕರ್ಮವಿಭಾಗ ಇಲ್ಲ.

ವರದಾಚಾರ್ಯ – ಅಲ್ಲಿ ಚಲನೆ ಇಲ್ಲ. ಆದ್ರಿಂದ ಅಲ್ಲಿ ಕರ್ಮವಿಲ್ಲ ಆ ಅರ್ಥ.

ಅಜ್ಜ – ಮನಸ್ಸು ಪರಿವರ್ತನೆ ಹೊಂದಿ ವಿಕಾಸವಾಗುವಂಥಾದ್ದು. ಸಂಕುಚಿತ ಭಾವನೆ ಹೋಗಿ ವಿಶಾಲ ಭಾವನೆ ಬರಬೇಕು. ವಿಶಾಲ ಭಾವನೆ ವಿಕಾಸವಾದಾಗ ಮನಸ್ಸು ಇಲ್ಲ. ಮುಗೀತು ಅಲ್ಲಿಗೆ. ಇದೆಲ್ಲ ಕೃತಿಯ ರೂಪದಲ್ಲಿ ಬರ್ಬೇಕು. ಪ್ರತಿಯೊಂದು ಕೃತಿಯಲ್ಲಿ ಬಂದಾಗ . . . . ನೋಡಿ ಅಲ್ಲಿ . . . .

ವರದಾಚಾರ್ಯ – ಕೇನ ಕಂ ಪಶ್ಯೇತ್, ಕೇನ ಕಂ ವಿಜಾನೀಯಾತ್ (केन कं पश्येत् केन कं विजानीयात्) ಅಂತ ಹೇಳ್ತಾರೆ. ಮತ್ತೆ ಅಲ್ಲಿ ನೋಡುವವನಾರು, ತಿಳಿಯುವವನಾರು.

ಅಜ್ಜ – ಏನಪ್ಪ ಇದು. ಇದೆಲ್ಲ ಧ್ಯಾನದಿಂದ ಸಂಭವಿಸುವಂಥಾದ್ದು.

ವರದಾಚಾರ್ಯ – ಏನು ಸ್ಥಿತಿ, ಏನು ಸ್ಥಿತಿ, ಅಬ್ಬ ಅಬ್ಬ.

ಅಜ್ಜ – ಇಲ್ಲಿ ಬೆಂಗಳೂರಿನಲ್ಲಿ ಬೇಕಾದಷ್ಟು ಧ್ಯಾನದ ಕ್ಲಾಸುಗಳುಂಟು. ನಾವು ಮೊನ್ನೆ ಹೋಗಿ ನೋಡಿ ಆಯ್ತು. ಧ್ಯಾನದ ಕ್ಲಾಸುಗಳು ಎಷ್ಟೆಷ್ಟು ವರ್ಷಗಳಿಂದ ಧ್ಯಾನ ಮಾಡ್ತಾರೆ, ಆದ್ರೆ ಅವರಲ್ಲಿ ಪೂರ್ಣತೆಯನ್ನು ಹೊಂದಿದವನನ್ನು ನಾನು ಇದುವರೆಗೆ ನೋಡ್ಲಿಲ್ಲ. ಅಂಥವರನ್ನು ನೋಡ್ಬೇಕು ಅಂತ್ಹೇಳಿ ನಾವು ಕಾಯ್ತಾ ಉಂಟು.

ಪ್ರತಿಯೊಬ್ಬನ ಹೃದಯವನ್ನು ನೋಡುವಂಥಾದ್ದು. ವ್ಯಕ್ತಿಯ ದೇಹವನ್ನಲ್ಲ. ಧ್ಯಾನ ಮಾಡುವವನು ನಿರಂತರ ಧ್ಯಾನದಿಂದ ಧ್ಯಾನ ಮಾಡಲ್ಪಡುವವನೇ ಆಗಬೇಕು ಎಂಬುದು ಸಿದ್ಧಾಂತ. ಇಲ್ಲವಾದ್ರೆ ಧ್ಯಾನಕ್ಕೆ ಫಲ ಇಲ್ಲ. ಅಲ್ಲಿಂದ ಪ್ರಾರಂಭ ವಿಕಾಸ. ಧ್ಯಾನ ಮಾಡಲ್ಪಡುವವನ ಅಸ್ತಿತ್ವವು ನಾಶವಾದಾಗ ಮಾತ್ರ ಸಾಕ್ಷಾತ್ಕಾರ. ಅಲ್ಲಿ ಯಾವುದೂ ಇಲ್ಲ. ಸ್ಥಿತಿ ಇಲ್ಲದ ಸ್ಥಿತಿ. ಅದುವೇ ನಾನು. 'ನಾನು' ಎಂಬುದು ಅದರ ಇರುವಿಕೆಯನ್ನು ಸೂಚಿಸ್ತದೆ. ಅದು ಮಾತ್ರ ಇರುವಂಥಾದ್ದು. ಇದು ಮಾತುಗಳಲ್ಲಿ ಹೇಳುವಾಗ ನಾನು ಎಂಬ ಶಬ್ದವನ್ನು ಕೂಡಿಸಿಕೊಳ್ಳಬೇಕು. ಇಲ್ಲವಾದ್ರೆ ಅರ್ಥ ಆಗೋದಿಲ್ಲ.

ವರದಾಚಾರ್ಯ – ಆಶ್ಚರ್ಯ, ಆಶ್ಚರ್ಯ.

ಅಜ್ಜ – ಆನಂದಮಯ ಜೀವನ.

ವರದಾಚಾರ್ಯ – ಜೀವಂತವಾದ ವೇದಾಂತ ಅಂದ್ರೆ ಇದೆ.

ಅಜ್ಜ – ಅದು ದೇಹ ಇರುವಲ್ಲಿವರೆಗೆ ಒಂದು ಜೀವನ ಬೇಕದಕ್ಕೆ. ಇದನ್ನೆಲ್ಲ ಹೇಳ್ಳಿಕ್ಕೆ . . . ಮಾತುಗಳನ್ನು ಉಂಟುಮಾಡಿಕೊಳ್ಬೇಕು ಅಷ್ಟೆ. ಮಾತು ಬುದ್ಧಿಗೆ ಅತೀತವಾದ್ದಲ್ವಾ. ಅದನ್ನು ಹೇಗೆ ವರ್ಣನೆ ಮಾಡೋದು. ಅನುಭವಿಸಿಯೇ ತೀರಬೇಕಷ್ಟೆ.

ವರದಾಚಾರ್ಯ – ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ (यतो वाचो निवर्तंते अप्राप्य मनसा सह) ಅಂತ ಉಪನಿಷತ್ತಿನಲ್ಲಿ ಬರುತ್ತೆ.

ಅಜ್ಜ – ಅನುಭವಿಸಿಯೇ ತೀರುವಾಗ, ಅನುಭವಿಸುವವನೇ ಇಲ್ಲದೆ ಆದಾಗ ಆ ಸ್ಥಿತಿ ಮತ್ತೆ ಅನುಭವ ಆದೆ ಅಂತ ಹೇಳುವವ ಇಲ್ಲ ಅಲ್ಲಿ. ಯಾವುದೂ ಇಲ್ಲ. ಅದೇ ಸಾಕ್ಷಿರೂಪ. ಅದರ ಇರುವಿಕೆಯಿಂದ ಇದೆಲ್ಲಾऽऽऽ ನಡಿತದೆ. ಟೈಂ ಆಯ್ತು.

ಮಂಜು – ಇನ್ನ ಟೈಮಿದೆ ೫ ನಿಮಿಷ ಇದೆ ಅಜ್ಜ.

ಅಜ್ಜ – ಏನೋ ಒಂದು ಪ್ರಾರ್ಥನೆ ಉಂಟಂತೆ. ಹ. ಹ. ಹ.

ವರದಾಚಾರ್ಯ – ಜಗತ್ತಿನಲ್ಲಿ ಪರಿವರ್ತನೆ ಆಗೇ ಆಗುತ್ತೆ ಅಂತ ಹ್ಯಾಗೆ ಹೇಳ್ತೀರಿ ಅಂತ ಅಂದೆ ಅದಕ್ಕೆ. ಇಷ್ಟು ಬಂದ ಮೇಲೆ ಮುಂದೆ ಬರೋದಿಕ್ಕೆ ಸಾಧ್ಯ ಇಲ್ವಾ ಅಂತಂದುಬಿಟ್ರು.

ಅಜ್ಜ – ನೋಡಿ, ಪರಿವರ್ತನೆ ಅಂದ್ರೆ, ಪ್ರತಿಯೊಂದು ಜೀವಿಯೂ ಪರಿವರ್ತನೆ ಆಕ್ತಾ ಉಂಟಲ್ಲ.

ವರದಾಚಾರ್ಯ – ಅಯ್ಯಬ್ಬ. ಯಾತಕ್ಕೋಸ್ಕರ ಬಂದಿರುವುದು ಇಷ್ಟು ಅದ್ಭುತವಾದ ಶಕ್ತಿ ಅಂತ.

ಅಜ್ಜ – ಪ್ರತಿಯೊಂದು ಪರಿವರ್ತನೆ ಆಕ್ತಾ ಉಂಟು. (ದ್ರಾಕ್ಷಿಯನ್ನು ತೋರಿಸುತ್ತಾ) ಇದು ಮೊದ್ಲು ಹೇಗಿತ್ತು. ಈಗ ಪರಿವರ್ತನೆ ಆಗಿ ಆಗಿ ಹೇಗಾಗಿದೆ. ಇದು ವಿಕಾಸವಾಗುವಾಗ ಇದಿಲ್ಲವೇ ಇಲ್ಲ ಇದು. ವಿಕಾಸ ಆಗೊಲ್ಲಿವರೆಗೆ ಉಂಟು. ವಿಕಾಸ ಆಗ್ಲೇಬೇಕಲ್ಲ, ಬೆಳವಣಿಗೆ ಆದ್ಮೇಲೆ. ಅದೇ ರೀತಿ ಜೀವಾತ್ಮನು ಪರಿವರ್ತನೆ ಹೊಂದಿ ವಿಕಾಸವಾಗುವಾಗ, ಅವನ ಅಸ್ತಿತ್ವವೇ ಇಲ್ಲದೆ ಆಯ್ತು. ಸ್ವತಂತ್ರನಾದ. ಇರೋದು ಮತ್ತೆ ಎಲ್ಲ ಈ ಆವರಣ ಉಂಟಲ್ಲ. ಈ ಮನಸ್ಸನ್ನು ಆವರಣದ ಮೇಲೆ ಕೇಂದ್ರೀಕರಿಸಿ ಆ ಆವರಣವನ್ನು ಸ್ಫೋಟಬೊಳಿಸುವಂಥಾದ್ದು. ಅಂದ್ರೆ ನಾನು ಯಾರು? ಎಂಬ ಶೋಧನೆಯಿಂದ ವಿಕಾಸಗೊಳಿಸುವಂಥಾದ್ದು. ಆ ಕೇಂದ್ರೀಕರಿಸ್ಲಿಕ್ಕೆ, ಈ ಮನಸ್ಸು ಹ್ಯಾಗಾಗ್ಬೇಕು. ನದಿಯ ನೀರು

ಸಾಗರದಲ್ಲಿ ಹೋಗಿ ಸೇರುವಂಥಾದ್ದು, ಸೇರಬೇಕಾದ್ರೆ ಆ ಅಳಿವೆ ಬಾಗಿಲಿನಲ್ಲಿ ಎಷ್ಟು ಕೆಲಸ ಉಂಟು. ಆ್ಞಂ. ಎಲ್ಲ ಕಸವನ್ನು ಹೊರಗೆ ಹಾಕಿತು. ಶುದ್ಧ ನೀರನ್ನು ಮಾತ್ರ ಒಳಗೆ ತೆಗೊಳ್ತದೆ. ಕೆಲ್ಸ ಎಷ್ಟುಂಟು. ಆ್ಞಂ. ಅದೇ ರೀತಿಯಲ್ಲಿ ಇಲ್ಲಿ ಆಗ್ಬೇಕಲ್ಲ. ಜೀವಾತ್ಮನು ಪರಮಾತ್ಮನಲ್ಲಿ ಐಕ್ಯತೆ ಆಗ್ಬೇಕಾದ್ರೆ, ಎಷ್ಟು ಕೆಲಸ ಉಂಟು. ಕರ್ಮಬಂಧನದಿಂದ ಕಂಪ್ಲೀಟ್ ಬಿಡುಗಡೆ ಹೊಂದಿದ ಜೀವಾತ್ಮನಿಗೆ ಮಾತ್ರ ಸಾಧ್ಯ ಅದು. ಅಲ್ಲಿ ಹೋಗಿ ಅಂದ್ರೆ, ಪರಮಾತ್ಮನಲ್ಲಿ ಐಕ್ಯತೆ ಆಯ್ತು. ಆದ್ರೆ ಅದು ಪೂರ್ಣವಲ್ಲ. ಪುನಃ ಬಂದು ವಿಕಾಸ ಹೊಂದಿದಾಗ ಮಾತ್ರ ಪೂರ್ಣ ಆಯ್ತು. ಇದು ದೇಹದಲ್ಲಿರುವಾಗ್ಲೇ ಆಗುವಂಥಾದ್ದು. ಇಷ್ಟು ಕೆಲ್ಸ ಆಗ್ದಿದ್ರೆ ಈ ದೇಹ ಯಾಕಿರೋದು? ಅಲ್ವಾ. ಆ್ಞಂ. ಅದರ ಕೆಲ್ಸಕ್ಕಾಗಿ ಈ ದೇಹವನ್ನು ಅದು ಉಂಟುಮಾಡಿಕೊಂಡಿತು. ಇದ್ರಲ್ಲಿ ಬಂದು ಕೂತ್ಕೊಂಡಿತು. ಇದನ್ನು ಬಿಟ್ರೆ ಬೇರೆ ಏನೂ ಇಲ್ಲ. ಈ ಮನೆಯಲ್ಲಿ, ಈ ಮನೆ ಯಜಮಾನ ಇಲ್ಲವಾದ್ರೆ, ಈ ಮನೆ ಮತ್ತೆ ಯಾರಿಗಿದು. ಆ್ಞಂ. ಅದೇ ರೀತಿಯಲ್ಲಿ ಇದ್ರ (ದೇಹವನ್ನು ತೋರಿಸುತ್ತಾ) ಯಜಮಾನ . . . . . ಅವನಿಗಿದು ಮನೆ. ಅದು ತಪ್ಪಿ ಆ ಮನೆಯೇ ತಾನು ಅಂದ್ರೆ, ಈ ದೇಹವೇ ತಾನು ಎಂಬ ಭಾವನೆಯಿಂದ ಅಲ್ಲಿ ತಪ್ಪಿ ಹೋಗ್ತದೆ. ಅದು ತಪ್ಪಿ ಬೀಳೋದು ಒಳ್ಳೆದಕ್ಕೆ. ಯಾಕೆ? ಸರಿಪಡಿಸ್ಲಿಕ್ಕಾಗೇ ಅಲ್ಲಿ ತಪ್ಪಿ ಬೀಳೋದು. ಆ ತಪ್ಪಿ ಬೀಳ್ದೇ ಇದ್ರೆ ಅವ್ನಿಗೆ ಸರಿಪಡಿಸಿಕೊಳ್ಳಿಕ್ಕಾಗೋದಿಲ್ಲ. ಹಾಗಾಗಿ ದೇಹವೇ ತಾನು ಅಂತ್ಹೇಳಿ ಬರುವಂಥಾದ್ದು ಬಹಳ ಒಳ್ಳೇದು. ಒಂದು ದಿವ್ಸ ಅವ ಆಲೋಚನೆ ಮಾಡ್ತಾನೆ. ಓಹೋ ಇದು ಎಂಥದ್ದು. ನಾನು ನಂಬಿಕೊಡಿದ್ನಲ್ಲ ಅಂತ. ಆ ನಂಬಿಕೊಂಡಿದ್ರಿಂದ ಅವ್ನಿಗೆ ಭಾವನೆ ಬಂತಲ್ಲಿ. ಇದು ಸರಿಯಲ್ಲ. ಇದು ಏನು? ಅಂತ ನೋಡ್ಲಿಕ್ಕೆ ಶುರು ಮಾಡಿದ. ಅದು ಹೋಯಿತು ಅಂದ್ರೆ ದೇಹಭಾವನೆ ಹೋಯಿತು. ಎರಡ್ನೆದು ಜೀವ ಭಾವನೆ ಬಂತು. ಇದಕ್ಕಿಂದ ದೊಡ್ಡ ಅಹಂಕಾರ ಅದು. ಅದು ಹೋದಾಗ ಭಾವನಾತೀತ ಸ್ಥಿತಿ.

27-04-2000

ಮಂಜು ಮನೆ – ಕೆಲವರೊಡನೆ.

ಒಬ್ಬರು – ಇವೆಲ್ಲ ಶಾಸ್ತ್ರ ಸಿದ್ಧಾಂತಗಳು. ಹೇಳಿ ಕೇಳಿ ಗೊತ್ತು. ಅನುಭವದಲ್ಲಿಲ್ಲ ಅದು. ಈ ವಿಷಯ ಅನುಭವಕ್ಕೆ ಬರುವಂಥಾದ್ದು ಸತ್ಯ. ಅನುಭವಕ್ಕೆ ಬರ್ಬೇಕು. ಅದೇ ತಾವು ಹೇಳಿದ್ದು.

ವರದಾಚಾರ್ಯ – ಬರ್ತದೆ, ಬರ್ತದೆ. ಕ್ರಮವಾಗಿ ಬರ್ತದೆ.

ಅಜ್ಜ – ಜೀವಾತ್ಮನು ದೇಹದಲ್ಲಿರುವಾಗ್ಲೇ ಸ್ವತಂತ್ರನಾಗುವಂಥಾ ವಿಚಾರಗಳು. ಜೀವಾತ್ಮನು ಮೊದಲು ಕರ್ಮ ಬಂಧನದಿಂದ ಬಿಡುಗಡೆ ಆಗ್ಬೇಕು. ಕರ್ಮ ಬಂಧನದಿಂದ ಬಿಡುಗಡೆ ಹೊಂದಿದಾಗ ಅವ, ದೇಹದಲ್ಲಿ ಮತ್ತೆ ನಿಲ್ಲೋದಿಲ್ಲ. ಕರ್ಮಬಂಧನಕ್ಕೆ ಕಾರಣವಾದ ಈ ಸೂಕ್ಷ್ಮದೇಹವನ್ನು ಬಿಟ್ಟು ಹೊರಟುಹೋಕ್ತಾನೆ. ಆದ್ರೆ ಅದು ಪೂರ್ಣವಾಗ್ಲಿಲ್ಲ. ಪೂರ್ಣತೆಗಾಗಿ ಪುನಃ ಬಂದ. ಬಂದು ವಿಕಾಸ ಹೊಂದಿದಾಗ ಪೂರ್ಣತೆ ಆಯ್ತು. ಜೀವಾತ್ಮನು ಪರಮಾತ್ಮನಲ್ಲಿ ಒಂದೇ ಆಗಿದ್ದಾನೆ. ಕರ್ಮಬಂಧನದಿಂದ ಬಿಡುಗಡೆ ಹೊಂದಿದಾಗ, ಐಕ್ಯತೆ ಆಯ್ತು. ಆದ್ರೂ ಅದೂ ಪೂರ್ಣವಲ್ಲ.

ವರದಾಚಾರ್ಯ – ಐಕ್ಯತೆ ಆದ್ರೂ ಪೂರ್ಣವಲ್ಲ, ಓಹೋ.

ಅಜ್ಜ – ಅಲ್ವಾ. ನದಿಯು ಸಾಗರವನ್ನು ಸೇರಿದ್ರೆ ಅದು ಪೂರ್ಣವಾಗ್ಲಿಲ್ಲ. ತುಂಬಾ ವಿವರಗಳುಂಟು ಇದಕ್ಕೆಲ್ಲ. ಗಂಟೆಗಟ್ಲೆ ಮಾತಾಡ್ಬೋದು. ಆದರೆ ಒಂದನ್ನ ಆಚರಣೆ ತಂದ್ರೆ ಸಾಕು. ಅಹಂ 'ನಾನು' ಈ ದೇಹವಲ್ಲ. ಈ ದೇಹದಲ್ಲಿರುವವನು ಎಂಬುದು ಅವನ ಜೀವನದಲ್ಲಿ ಕೃತಿಯ ರೂಪದಲ್ಲಿ ಅಂದ್ರೆ ಆಚರಣೆ ತಂದಾಗ ಮಾತ್ರ, ನಮ್ಮ ಮಾತುಗಳು ಅಲ್ಲಿಂದ ಮತ್ತೆ ಪ್ರಾರಂಭ. ತಂದೆ ತಾಯಿಯ ಗರ್ಭದ ಮೂಲಕ ಬಂದವನು ನಾನಲ್ಲ. ಅದಲ್ಲ ಅಂತ ಹೇಳುವವನನ್ನು ಒಬ್ಬನನ್ನು ತೋರಿಸ್ತೀರಾ ನಿಮ್ಮ ಜೀವನದಲ್ಲಿ. ಆ್ಞಂ. ನಮಗೆ ಅದಕ್ಕೆ ಮೊದ್ಲೇ ಬೇಕು. ತಂದೆ ತಾಯಿಯ ಗರ್ಭದಲ್ಲಿರುವಾಗ ಬರುವ ಶಿಶು, ಅದಕ್ಕೆ ಮೊದ್ಲೇ ಅವ ಬಂದು ಸೇರ್ತಾನೆ ಆ ದೇಹಕ್ಕೆ. ಅಲ್ಲಿಂದ ಮುಂದುವರಿಸಿದ ನಾವು ಹೇಳುವಂಥಾ ವಿಚಾರ ಎಲ್ಲ ಅದು. ನಾನು ಅಂದ್ರೆ ಅವನು. ಬಂದವನು. ಜನ್ಮಕ್ಕೆ ಬಂದವನು ನಾನು. ಅಲ್ವಾ. ಆ್ಞಂ. ಯಾರು ಜನ್ಮಕ್ಕೆ ಬಂದದ್ದು? ಯಾರು? ಹೇಗೆ ಬಂದದ್ದು? ಅನುಭವ ಇದ್ರೆ ಯಾರಾದ್ರೂ ಹೇಳಿಬಿಡಿ ಒಂದೆರಡು ಮಾತುಗಳನ್ನು, ನಮಗೆ ಮಾತು ಮುಂದುವರಿಸ್ಲಿಕ್ಕೆ ಸ್ವಾನುಭವ ಇದ್ರೆ ಮಾತ್ರ ಮಾತ್ನಾಡಿ. ಯಾರು? ಜನ್ಮಕ್ಕೆ ಬಂದವ ಯಾರು?

ಒಬ್ಬರು – ಕರ್ಮ ಮಾಡಿದ ಜೀವಿ. ಜೀವಾ ಅನ್ನಿಸ್ಕೊಂಡವ್ನು.

ಅಜ್ಜ – ಅದೆಲ್ಲ ತತ್ವ ಸಿದ್ಧಾಂತ. ಅದೆಲ್ಲ ಬೇಡ. ಜೀವಿ ಎಂಥದ್ದು. ಬಂದವನು ನಾನು ಅಂತ ಹೇಳಿ.

ಒಬ್ಬರು – ಹೌದು ನಾನು.

ಅಜ್ಜ – ಸ್ವಾನುಭವ ಉಂಟಾ, ಹೇಳ್ಬೋದ. ಅದರ ಬಗ್ಗೆ ಐದು ನಿಮಿಷ ಮಾತಾಡಿ.

ಒಬ್ಬರು – ಇಲ್ಲ ನನ್ನ ಅನುಭವದಲ್ಲಿ ಇಲ್ಲ ಅದು. ಶಾಸ್ತ್ರ ಪಾಂಡಿತ್ಯ ಅಷ್ಟೇ ವಿನಾ ಅನುಭವವಿಲ್ಲ.

ಅಜ್ಜ – ನಮಗೆ ಬೇಡ ಶಾಸ್ತ್ರ ಪಾಂಡಿತ್ಯ. ಬೇಕಾದವರಿಗೆ ಇರಬಹುದದು. ಒಳ್ಳೆ ಹೆಸರು ಕೀರ್ತಿ ಬರಬಹುದು. ಭಾಷಣ ಕೊಡ್ಬಹುದು. ಓ ಒಳ್ಳೆ ಪಾಂಡಿತ್ಯ ಇದೆ ಅಂತ್ಹೇಳಿ ಹೇಳ್ತಾರೆ ಜನ. ಇಲ್ಲಿಂದ ಬರುವ ಮಾತುಗಳಿಗೆ ಯಾವ ಶಾಸ್ತ್ರ ಪಾಂಡಿತ್ಯವೂ ಇಲ್ಲ, ಹೆಸರೂ ಇಲ್ಲ, ಕೀರ್ತಿಯೂ ಇಲ್ಲ. ಹೆಸರಿಗೆ ಒಬ್ಬ ಬೇಕಲ್ಲ ಅಲ್ಲಿ ಜನ. ಎಲ್ಲಿದ್ದಾನೆ? ದೇಹವೋ? ಅಲ್ಲ. ದೇಹದಲ್ಲಿರುವವನು ಯಾರದು? ಅವನು ತನ್ನ ಅಸ್ತಿತ್ವವನ್ನು ಕಳಕೊಂಡಾಗ ನೋಡಿ ಸಾಕ್ಷಾತ್ಕಾರ. ಅದು ನಮಗೆ ಬೇಕಾದ್ದೀಗ.

ಒಬ್ಬರು – ನಾನು ಅನ್ನೋದು ಕಳಕೊಂಡಾಗ ಅಲ್ಲಿ ಯಾರೂ ಇರೋದಿಲ್ಲಲ್ಲ. ಯಾರಿರ್ತಾರೆ ಅಲ್ಲಿ.

ಅಜ್ಜ – ಅಯ್ಯೋ ಅದನ್ನ ಮತ್ತೆ ಮಾತಾಡ್ಬೋದು. ಅದಕ್ಕೆ ಮೊದಲು ಮಾತಾಡಿದ್ರೆ ಅದು ಮಾತಲ್ಲ ಬಿಡಿ. ಮನಸ್ಸು ಬುದ್ಧಿಗೆ ಅತೀತವಾದ್ದೂಂತುಂಟಲ್ಲ, ನೋಡಿ ಅಲ್ಲಿಂದ . . . . ಇಲ್ಲ ಅಂತ್ಹೇಳಿದ್ರೆ ಹಾಗಾದ್ರೆ ಯಾವ್ದು ಇಲ್ವಾ? ಯಾವುದಿದೆ? ಇರುವಂಥಾದ್ಯಾವುದು. ಆಯ್ತು. ನಾನು ಕಳಕೊಂಡ ಮೇಲೆ ಯಾವ್ದು ಇಲ್ಲಾ ಅಂತಾಯ್ತು. ಮತ್ಯಾವುದುಂಟಲ್ಲಿ ನಾನುವಿನಿಂದ ಆಚೆಗೆ.

ಒಬ್ಬರು – ಆತ್ಮ ಚೈತನ್ಯ ಒಂದೇ ಇರೋದು.

ಅಜ್ಜ – ಛೆ, ಅದನ್ನು . . . ಅಲ್ಲಿ ನೋಡಿ ಈಗ ಇರೋದು ಅದರ ಇರುವಿಕೆಯಿಂದ ಇದಕ್ಕೆ ಚೇತನ ಬರ್ತದೆ. ಮೂರು ದೇಹಗಳು ಸ್ಥೂಲ, ಸೂಕ್ಷ್ಮ, ಕಾರಣ. ಆತ್ಮನ ಇರುವಿಕೆಯಿಂದ ಇದಕ್ಕೆಲ್ಲ ಚಾಲನೆ ಬಂತು. ಅದು ಉಂಟಲ್ಲ. ಹಾಗಾದ್ರೆ ಎಲ್ಲಿಂದ ಮಾತುಗಳು ಬರ್ತದೆ ಅಂತ ಕೇಳಿದ್ರೆ ಏನರ್ಥ ಇದಕ್ಕೆ. ಆ್ಞಂ.

ಒಬ್ಬರು – ಅಲ್ಲಿ ಇದ್ಯಾವುದೂ ಇರೋದೇ ಇಲ್ಲಲ್ಲ. ಅಲ್ಲಿದ್ದಾಗ ಇದ್ಯಾವುದೂ ಇಲ್ಲಲ್ಲ.

ಅಜ್ಜ – ಹಾಗಾದ್ರೆ ಪ್ರಪಂಚಕ್ಕೆ ಬೇಕಾಗಿ ಇರ್ಬೋದಲ್ಲ.

ವರದಾಚಾರ್ಯ – ಪುಸ್ತಕದಲ್ಲಿ ಹಾಗೆ ಹೇಳ್ಕೊಂಡಿದ್ದಾರೆ. ಅವನಲ್ಲಿ ಇರುವಾಗ ಪ್ರಪಂಚವೇ ಇರೋದಿಲ್ಲಲ್ಲಾ ಅಂತ್ಹೇಳಿ.

ಅಜ್ಜ – ಛೇ . . . ಅವನ ಇರುವಿಕೆಯಿಂದ . . . ಶಾಸ್ತ್ರದಲ್ಲಿ ಇರುವುದೂ ಹಾಗೆ. ಯಾವ್ದು ಅವನ ಇರುವಿಕೆಯಿಂದ ಇವೆಲ್ಲ ಚಲಿಸ್ತದೆ.

ವರದಾಚಾರ್ಯ – ಬ್ರೇನ್ ಡೆಡ್ ಆದ್ರೂ ಮಾತಾಡ್ಬೋದು ಅಂತ ಅಜ್ಜ ಒಮ್ಮೆ ನನ್ನ ಹತ್ರ ಹೇಳಿದ್ದಾರೆ. ಹಾಗಿರುವಾಗ ನಾವೆಲ್ಲಾ ಆ ವಿಚಾರಗಳನ್ನ ಹೇಗೆ ಹೇಳೋದು.

ಅಜ್ಜ – ಅಸ್ತಿತ್ವವನ್ನು ಕಳಕೊಳ್ಳೋದು ಅಂದ್ರೆ ಹ್ಯಾಗೆ. ಅಸ್ತಿತ್ವವನ್ನು ಕಳಕೊಳ್ಳೋದೂ ಅಂದ್ರೆ ಯಾವುದು ಇಲ್ಲ ಅಂತ ಅಲ್ವಾ.

ಒಬ್ಬರು – ಹೌದು.

ಅಜ್ಜ – ಹಾಂ. ಅಸ್ತಿತ್ವ ಅಂದ್ರೆ ಏನು? ಚ್ಞಂ.

ವರದಾಚಾರ್ಯ – ಭಾವನೆಗಳೆಲ್ಲ ಹೋಗುತ್ತೆ ಅದು ಇರುತ್ತಲ್ಲ.

ಅಜ್ಜ – ಹಾಗೆಲ್ಲ ಉಂಟು ಈಗ ಹೇಳ್ಳಿಕ್ಕೆ ಆಗೋದಿಲ್ಲ. ಕೆಲ್ಸ ಆಗ್ಬೇಕಲ್ಲ ಮೊದ್ಲು. ಮನಸ್ಸು ಅಂತರ್ಮುಖ ಆಗ್ಬೇಕಲ್ಲ ಮೊದ್ಲು. ಅಂತರ್ಮುಖವಾದ ಮನಸ್ಸಿಗೆ ಅದನ್ನು ಜೀರ್ಣ ಮಾಡಿಕೊಳ್ಳುವ ಶಕ್ತಿ ಇರ್ತದೆ. ನಿಮಗೆಲ್ಲ ಅಂಥ ಶಕ್ತಿ ಇರಬಹುದು. ಇಲ್ಲ ಅಂತ ನಾವು ಹೇಳೋದಿಲ್ಲ.

ಒಬ್ಬರು – ಇಲ್ಲ ನಮ್ಮಲ್ಲಿಲ್ಲ.

ವರದಾಚಾರ್ಯ – ಇರಬಹುದು. ಇದೆ ಅಂತ ಇಲ್ಲ.

ಅಜ್ಜ – ಅಂಥಾದ್ದು ಇರ್ಲಿಕ್ಕೆ ಸಾಧ್ಯತೆ ಉಂಟು.

ಒಬ್ಬರು – ಅದಾಗ್ಲಿಕ್ಕೆ ಇಲ್ಲಿ ಬಂದಿರೋದು.

ಅಜ್ಜ – ಇಲ್ಲಿಂದ ಮಾತುಗಳು ಶಬ್ದಗಳು ಬರ್ತದೆ. ಇಲ್ಲಿ ನೋಡಿ. ಇಂಥವನು ಮಾತ್ನಾಡ್ತಾನೆ ಅನ್ನೋದು . . . . ನೋಡಿ ಕಳಕೊಳ್ಳೋದು ಅಂದ್ರೆ ಯಾವ್ದು?

ಒಬ್ಬರು – ನಾನು ಅನ್ನೋ ಅಹಂಕಾರ ಕಳಕೊಂಡಾಗ ಅದು ಮಾತಾಡುತ್ತೆ.

ಅಜ್ಜ – ಆ ಅಹಂಕಾರ ಕಳಕೊಳ್ಬೇಕಾದ್ರೆ ಏನಾಗ್ಬೇಕು? ಏನಾಗ್ಬೇಕು? ಈ ಜೀವಾತ್ಮನು ಪರಿವರ್ತನೆ ಹೊಂದಬೇಕು. ಇವನು ಪರಿವರ್ತನೆ ಹೊಂದಬೇಕಾದ್ರೆ ಜೀವನದಲ್ಲಿ ಏನ್ಮಾಡ್ಬೇಕು. ನಾಮಸ್ಮರಣೆ ಮತ್ತು ಧ್ಯಾನ, ನಿಷ್ಕಾಮಕರ್ಮ ಮತ್ತು ಶರಣಾಗತಿ, ಸತ್ಯ ಮತ್ತು ಅಹಿಂಸೆ. ಈ ಆರನ್ನು ಜೀವನದಲ್ಲಿ ಪರಿಪಾಲನೆ ಮಾಡಿಕೊಂಡಾಗ ಜೀವಾತ್ಮನು ಪರಿವರ್ತನೆ ಹೊಂದಿ ಅವನ ಹಾಗೆ ಆ ಮೂಲಸ್ವರೂಪದ ಹಾಗೆ ಆಗ್ಬಹುದು. ಆದ್ರೂ ಅದು ಅಂತಿಮವಲ್ಲ. ಅವನ ಸಾಮೀಪ್ಯಕ್ಕೆ ಹೋಗ್ಬಹುದು. ಅವನ ಅನುಗ್ರಹದಿಂದ ಪುನಃ ಜನ್ಮಕ್ಕೆ ಬಂದಾಗ . . . , ಪರಿವರ್ತನೆ ಹೊಂದಿದ ಜೀವಾತ್ಮನು ವಿಕಾಸ ಹೊಂದಿದಾಗ ಸ್ವತಂತ್ರನಾದ. ಇಷ್ಟು ಕೆಲಸಗಳಾಗ್ಬೇಕು.

ವರದಾಚಾರ್ಯ – ಕರ್ಮಗಳಿಂದ ನಿವೃತ್ತನಾದ ಮಾತ್ರಕ್ಕೂ ಪೂರ್ಣನಾಗುವುದಿಲ್ಲ.

ಅಜ್ಜ – ಇಲ್ಲ ಜನ್ಮ ಬಂಧನ ಉಂಟಲ್ಲ ಮತ್ತೂ ಕೂಡ.

ವರದಾಚಾರ್ಯ – ಅಬ್ಬ, ಅಬ್ಬ.

ಅಜ್ಜ – ಜನ್ಮ ಬಂಧನ ಉಂಟಲ್ಲ.

ವರದಾಚಾರ್ಯ – ಅಬ್ಬ. ಕರ್ಮಗಳು ಹೋದ್ರೆ ಜನ್ಮ ಬರೋದಿಲ್ಲ ಅಂತ್ಹೇಳಿ ಎಲ್ರೂ ತಿಳ್ಕೊಂಡಿರೋದು.

ಅಜ್ಜ – ಕರ್ಮದಿಂದ ಪರಿವರ್ತನೆ ಹೊಂದಿದವನಿಗೆ ಮಾತ್ರ ತಾನು ಯಾರು? ಎಂಬ ವಿಚಾರಕ್ಕೆ ಇಳಿಲಿಕ್ಕೆ ಸಾಧ್ಯ. ಅವನಿಗೆ ಜ್ಞಾನೋದಯ ಅಲ್ಲಿ. ಅಲ್ಲಿ ತನ್ನ ಅಸ್ತಿತ್ವವನ್ನು ಕಳಕೊಂಡಾಗ ನೋಡಿ . . . ಚ್ಞಂ. ಇದೂ ಕೂಡ ನೆಗೆಟೀವ್ ಚಿತ್ರ. ಪಾಸಿಟೀವ್ ಮಾಡೋದಾದ್ರೂ ಕೂಡ ಸಂಪೂರ್ಣ ಇಲ್ಲಿಂದ್ಲೇ ಬಂದದ್ದಾದ್ರೆ ಮಾತ್ರ. ಇಲ್ಲದಿದ್ರೆ ಅವರವರೇ ಒಂದು 'ಅಹಂ' ಉಂಟಲ್ಲ ಅದಕ್ಕೆ ಸರಿಯಾಗಿ ಒಂದು ಅರ್ಥ ಮಾಡಿಕೊಂಡು ಬರೆದ್ರೆ ಅದಾಗೋದಿಲ್ಲ. ಎಲ್ಲ ಹೇಳ್ತದೆ. ಆಮೇಲೆ. ಮೊದ್ಲು ನಿಷ್ಕಾಮಕರ್ಮ ಶರಣಾಗತಿ. ಫಲಾಪೇಕ್ಷೆ ಇಲ್ಲದೆ ಕರ್ಮಗಳನ್ನ ಮಾಡುವಂಥಾದ್ದು. ತನಗಾಗಿ ಯಾವ ಕರ್ಮಗಳೂ ಇಲ್ಲ. ತಾನು ಎಂಬ ಭಾವನೆ ನಾಶವಾದಾಗ ಮಾತ್ರ ನಿಷ್ಕಾಮಕರ್ಮ ಮಾಡ್ಲಿಕ್ಕೆ ಸಾಧ್ಯ.

ಇದರ ಫಲವೇ ಆನಂದ. ಆನಂದವನ್ನು ಅನುಭವಿಸಿ, ಅನುಭವಿಸಿ, ಅನುಭವಿಸಿ ಆನಂದವೇ ಆಗುತ್ತಾನೆ. ನಿಷ್ಕಾಮ ಕರ್ಮ ಮಾಡಿದವನಿಗೂ ಒಂದು ಜನ್ಮ ಉಂಟು.

ವರದಾಚಾರ್ಯ – ಹೋ, ಹೋ.

ಅಜ್ಜ – ಯಾಕೆ? ಅದನ್ನ ಅನುಭವಿಸಿ ಅದಾಗ್ಬೇಕಲ್ಲ ಇವನು. ನಿಷ್ಕಾಮಕರ್ಮ ಮಾಡುತ್ತ ಅಲ್ಲಿ ಶರಣಾಗತಿ ಬಂತು ಅವ್ನಿಗೆ. ಎಲ್ಲವು ನೀನೇ ಅಂತ್ಹೇಳಿ. ಎಲ್ಲವೂ ನೀನೇ ಅಂತ್ಹೇಳಿ ಆದ್ಮೇಲೆ, ಅಲ್ಲಿ ನಾನು ಎಂಬುದಕ್ಕೆ ಒಂದು ಅಸ್ತಿತ್ವ ಇದೆಯಾ ಅಲ್ಲಿ. ಅದೇ ನಾನುವನ್ನು ಕಳಕೊಳ್ಳುವಂಥಾದ್ದು. ಎಲ್ಲವು ನೀನೆ. ಆದಮೇಲೆ ಅಲ್ಲಿ ನಾನು ಉಂಟಾ? ಅಲ್ಲಿ ನಾನು ಅಂದ್ರೆ ಮತ್ತೆ ನೀನೆ. ಅವನೆ. ಅವನು ತನ್ನ ಅಸ್ತಿತ್ವವನ್ನು ಕಳಕೊಂಡಾಗ . . . ನೋಡಿ ತ್ರಿಪುಟಿ ನಾಶ ಎಂಬುದಕ್ಕೆ ಏನರ್ಥ? ಮೂರು ಹೋಗುವಂಥಾದ್ದು.

ವರದಾಚಾರ್ಯ – ಬಹಳ ಕಠಿಣ, ಕಠಿಣ.

ಅಜ್ಜ – ಚರ್ಚೆ ಮಾಡ್ಬೋದು. ಚರ್ಚೆ ಮಾಡೋದಕ್ಕೆ ನಾವು ಬೇಡ ಅಂತ ಹೇಳೋದಿಲ್ಲ. ನ್ಯಾಯಬದ್ಧವಾದ . . . ಕೃತಿಗಿಳಿದುಕೊಂಡು ಚರ್ಚೆ ಮಾಡ್ಬೇಕು. ಚರ್ಚೆ ಮಾಡಿದ್ಮೇಲೆ ಕೃತಿಗಿಳಿಬೇಕು.

*****

ಅದೇ ದಿನ ರಾತ್ರಿ 27-04-2000

ಅಜ್ಜ – ಹಿಂದಿನ ಜನ್ಮದಲ್ಲಿ ಹಾಗಾಯ್ತು ಈ ಜನ್ಮದಲ್ಲಿ.

ವರದಾಚಾರ್ಯ – ಕಷ್ಟಸಾಧ್ಯ. ಅದೇನು ಹುಡುಗಾಟವೋ. ಕೃಷ್ಣನಲ್ಲಿ ಏಕೀಭೂತವಾದ ಆತ್ಮ ಬರಬೇಕಾದ್ರೆ ಎಷ್ಟು ದೊಡ್ಡ ವಿಷಯ ಅದು. ಆಂ. ಲೋಕಕ್ಕೋಸ್ಕರ ಬಂದಿದೆ ಅದು

ಅಜ್ಜ – ವಿಕಾಸಕ್ಕಾಗಿ ಬಂತು. ವಿಕಾಸ ಹೊಂದಿ ಸ್ವತಂತ್ರವಾಯ್ತು.

ವರದಾಚಾರ್ಯ – ಈ ಲೋಕಕ್ಕೆ ಮಂಗಳವಾಗ್ಲಿಕ್ಕೋಸ್ಕರ ಬಂದಿದೆ ಅದು.

ಅಜ್ಜ – ಸ್ವತಂತ್ರವಾಯಿತು. ಆತ್ಮನೇ ಆಯಿತು. ಈಗ ಇಲ್ಲಿ ಸಾಕ್ಷಿರೂಪ ಅಂದ್ರೆ ಏನೂ ಇಲ್ಲ. ಅದರ ಇರುವಿಕೆಯಿಂದ ಇದು. . . .

ವರದಾಚಾರ್ಯ – ತಾನಾಗಿ ತಾನಾಗಿ ಎಲ್ಲವೂ ಆಕ್ತದೆ.

ಅಜ್ಜ – ಆಗಲೇ ಬೇಕು.

ವರದಾಚಾರ್ಯ – ಆಗ್ಲೇ ಬೇಕು.

ಅಜ್ಜ – ಹೌದೌದು.

ವರದಾಚಾರ್ಯ – ನಾನು ಹೊಡ್ತಾತ್ತಿದ್ದೀನಿ. ನಾನು ಹೊಡ್ತಾತ್ತಿದ್ದೀತಿ ತಮಗೋಸ್ಕರ.

ಅಜ್ಜ – ಹ. ಹ. ಹ. ಹ.

ವರದಾಚಾರ್ಯ – ನಾನು ಹೊಡ್ತಾತ್ತಿನಿ ಅದ್ರಲ್ಲೇನೂ ಸಂದೇಹವಿಲ್ಲ. ನನಗೇನಿಲ್ಲ ಸ್ವಾರ್ಥ ಏನಿಲ್ಲ. ನನಗೆಳ್ಳಷ್ಟು ಬೇಡ. ಯಾವ್ದು ಬೇಡ. ನನ್ನ ಹೆಸರನ್ನೂ ಎಲ್ಲೂ ನಿರ್ದೇಶನ ಮಾಡೋದು ಬ್ಯಾಡ.

ಅಜ್ಜ – ಹ. ಹ. ಹ. ನೀವು ಹೋದ್ದ ಕೆಲಸ ಆಯ್ತು.

ವರದಾಚಾರ್ಯ – ಅದೇ ಶ್ರಾದ್ಧಕ್ಕೋಸ್ಕರ ಹೋದದ್ದು ಆಯ್ತು.

*****

ಮಂಜು ಮನೆ, ಬೆಂಗಳೂರು.

ಶಾಂತ – ಪರಿವರ್ತನೆ ಹೊಂದಿ ವಿಕಾಸ ಹೊಂದಿದ ಮೇಲೆ ಅಲ್ವಾ ಏನೂ ಇಲ್ಲ ಅಂತ್ಹೇಳಿ ಗೊತ್ತಾಗೋದು.

ಅಜ್ಜ – ಅಷ್ಟರವರೆಗೆ ಉಂಟು ಎಂಥದ್ದುಂಟು. ಅಲ್ಲಿಗೋಗೂಲ್ಲಿವರೆಗೆ . . .

ಶಾಂತ – ಅಲ್ಲ ಅಜ್ಜ, ನೀವೇ ಮೊದಲು ಪರಮಾತ್ಮ ಅಂದ್ರೆ ಏನೋ ಅಂತ ತಿಳ್ಕೊಂಡು ಮಾಡಿದ್ರಲ್ವಾ. ಏನೇನ್ಮಾಡಿದ್ರಿ. ನಿಷ್ಕಾಮ ಕರ್ಮ . . .

ಅಜ್ಜ – ಎಲ್ಲ ಮಾಡಿಯಾಯ್ತು.

ಶಾಂತ – ನಿಷ್ಕಾಮಕರ್ಮ, ಶರಣಾಗತಿ, ಸತ್ಯ, ಅಹಿಂಸೆ ಇದೆಲ್ಲ ನೀವು ಮಾಡಿ ಆದ ಮೇಲೆ ನಿಮಗೆ ಗೊತ್ತಾದದ್ದು.

ಅಜ್ಜ – ಯಾರಿಗಾದ್ರೂ ಹಾಗೆ.

ಶಾಂತ – ಹಾಗೆ ಮಾಡಿ ಆದ ಮೇಲೆ ನಿಮಗೆ ಏನು ಗೊತ್ತಾಯ್ತು. ಏನು ಅನುಭವ ಆಯ್ತು.

ಅಜ್ಜ – ಯಾವುದೆಲ್ಲ.

ಶಾಂತ – ಹಾಗೆ ಮಾಡಿದಾಗ.

ಅಜ್ಜ – ಪರಿವರ್ತನೆ ಹೊಂದಿ . . .

ಶಾಂತ – ಒಂದು ರಾತ್ರಿಯಲ್ಲಿ ಪರಿವರ್ತನೆ ಆದದ್ದ.

ಅಜ್ಜ – ಅಲ್ಲ ನೋಡು. ಪರಿವರ್ತನೆ ಆದ ಮೇಲೆ ಎರಡನೇ ಹಂತದಲ್ಲಿ ಗೊತ್ತಾಗುವಂಥಾದ್ದು. ಮೊದಲನೇ ಹಂತದಲ್ಲಿ ಗೊತ್ತೇ ಇಲ್ಲ.

ಶಾಂತ – ಹೌದು ಪರಿವರ್ತನೆ ಆಗುವಾಗ . . . ಅಂದ್ರೆ ಆ ಸಮಯದಲ್ಲಿ ದಿನದಿಂದ ದಿನಕ್ಕೆ ಏನಾಕ್ತಾ ಇತ್ತು ಅಲ್ಲಿ.

ಅಜ್ಜ – ಕರ್ಮದಿಂದ ಪರಿವರ್ತನೆ ಆಯಿತು. ಪರಿವರ್ತನೆ ಆದ ಮೇಲೆ ಇಲ್ಲಿ ಬಂದ ಮೇಲೆ ಕೂಡ ಈ ಮನಸ್ಸು ಅದರಲ್ಲಿ . . . ಇವೆಲ್ಲ ಹೇಳ್ಳಿಕ್ಕೆ ಬಾಳ ಕಷ್ಟ ಆಕ್ತದೆ.

ಶಾಂತ – ನಿಷ್ಕಾಮಕರ್ಮ, ಶರಣಾಗತಿ ಇವುಗಳ ಮೂಲಕ ಮನಸ್ಸು ಪರಿವರ್ತನೆ ಆಯ್ತಲ್ಲಾ, ಪರಿವರ್ತನೆ ಹಂತ ಹಂತವಾಗಿ ಆಗಿದ್ದಲ್ವಾ. ಆ ಒಂದನೇ ಹಂತಕ್ಕೂ, ಎರಡನೇ ಹಂತಕ್ಕೂ ಏನು ವ್ಯತ್ಯಾಸ.

ಅಜ್ಜ – ಈಗ ನೋಡು, ಈ ಮನಸ್ಸು ಬೇರೆ ಅಲ್ವಾ. ಆ ಮನಸ್ಸು ಬೇರೆ ಅಲ್ವಾ. ಆ ಮನಸ್ಸನ್ನ ಅಲ್ಲೇ ಬಿಟ್ಟು ಹೋದದ್ರಿಂದ ಅದ್ಯಾವುದೂ ಗೊತ್ತಿಲ್ಲ. ಈ ಮನಸ್ಸು ನಮಗೆ ಸಿಕ್ಕಿದ್ದು. ಹಾಗಾಗಿ ಎಲ್ಲಿ ಹೊಡ್ದು ಹೋಗಿ, ಹೊಡ್ದು ಹೋಗಿ . . .

ಶಾಂತ – ಅಲ್ಲಾ ಅಜ್ಜ, ಮನಸ್ಸು ಬುದ್ಧಿ ಬೇರೆ ಆದ್ರೂ, ಆ ಬಂದ ಶಕ್ತಿ ಒಂದೇ ಅಲ್ವ ಕಾರಣ ಶರೀರ ಉಂಟಲ್ಲ.

ಅಜ್ಜ – ಮನಸ್ಸಿದ್ರೆ ಮಾತ್ರ ಅದಕ್ಕೆ ಗೊತ್ತಾಗೋದು. ಹೋ ಅದು ಗೊತ್ತುಂಟಾ ಕತೆ. ಈ ಮನಸ್ಸು ಬಂದ ಶಕ್ತಿಯಲ್ಲಿ ಕೇಂದ್ರೀಕೃತವಾಗಿ ನಾನು ಅಂದರೆ . . .

ಶಾಂತ – ಆಯ್ತು. ಹಾಗಾದ್ರೆ ನೀವೇ ಹೇಳಿದ ಹಾಗೆ, ನೀವು ಹಿಂದೆ ದೇಹವನ್ನು ಬಿಟ್ಟು ಮೂರನೇ ವಲಯಕ್ಕೆ ಹೋದ್ರಲ್ಲ.

ಅಜ್ಜ – ಹೌದು.

ಶಾಂತ – ಅಲ್ಲಿ ಧ್ಯಾನಾಸಕ್ತ ಆಗಿದ್ದೆ ಅಂತ ಹೇಳಿದ್ರಲ್ಲ.

ಅಜ್ಜ – ಅಲ್ಲಿ ಧ್ಯಾನಾಸಕ್ತ ಆಗಿದ್ದು, ಕಂಡದ್ದು ಯಾರಿಗೆ? ಈ ಸುಪ್ತ ಪ್ರಜ್ಞೆಗೆ ಗೋಚರ ಆಗಿದ್ದು. ಅದೆಲ್ಲ ಈ ಪ್ರಜ್ಞೆಗೆ Photo ಬೀಳ್ತಾ ಇತ್ತು.

ಶಾಂತ – ಅಲ್ಲಿ ಕೆಂಪು ಏಡಿ ಕಂಡಿತು ಅಂತ ಹೇಳಿದ್ದು.

ಅಜ್ಜ – ಎಲ್ಲ Photo ಬೀಳ್ತದೆ ಇಲ್ಲಿ ಈ ಪ್ರಜ್ಞೆಗೆ.

ಶಾಂತ – ಅದು ಇಲ್ಲಿ ಪ್ರಜ್ಞೆಗೆ ಗೊತ್ತಾದದ್ದು. ಅಲ್ಲಿದ್ದ ನೀವು ಏನನ್ನೂ ನೋಡ್ಲೇ ಇಲ್ವಾ.

ಅಜ್ಜ – ಅಲ್ಲಿ ನೋಡ್ಲಿಕ್ಕೆ ಮನಸ್ಸಿಲ್ಲಲ್ಲ. ಅದೆಲ್ಲ ಕಾಣೋದು ಇಲ್ಲಿ ಈ ಪ್ರಜ್ಞೆಗೆ. ರಂಪೂರ್ಣ ವಿಚಾರವಾದಿಗಳು ಇದನ್ನ ಬರೀಬೇಕು. ಅಲ್ಲಿ ಬೆಳಕು ಉಂಟು. ಇಲ್ಲಿರುವ ಸುಪ್ತ ಪ್ರಜ್ಞೆಗೆ ಅದು ಕಾಣ್ತದೆ. ಎಲ್ಲ ಹೀಗೀಗೇ ಉಂಟು ಅಂತ್ಹೇಳಿ ಕಾಣ್ತದೆ. ಕೃಷ್ಣ ಅಲ್ಲಿ ಕಂಡದ್ದು ಅದು ಇದು ಎಲ್ಲ ಕಾಣ್ತದೆ.

ಶಾಂತ – ಆಗ್ಲೀ, ಇಲ್ಲಿಗೆ ಬಂದ ಮೇಲೆ ಈ ಮನಸ್ಸಿಗೆ ಅದೇ ಶಕ್ತಿ ಬಂದದ್ದು ಅಂತ್ಹೇಳಿ ಹೇಗೆ ಗೊತ್ತಾಯ್ತು. ಈ ಮನಸ್ಸು ಬುದ್ಧಿ ಬೇರೆ, ಅದು ಬೇರೆ ಅಲ್ವಾ.

ಅಜ್ಜ – ಈ ಮನಸ್ಸು ಪರಿವರ್ತನೆ ಹೊಂದಿದ ಮನಸ್ಸಲ್ವಾ.

ಶಾಂತ – ಪರಿವರ್ತನೆ ಹೊಂದಿದ ಮನಸ್ಸಿಗೆ ಎಲ್ಲ ಗೊತ್ತಾಗೋದಿಲ್ವಾ.

ಅಜ್ಜ – ಆ ಸುಪ್ತ ಪಜ್ಞೆಗೆ ಗೊತ್ತಾಕ್ತದೆ.

ಶಾಂತ – ಪರಿವರ್ತನೆ ಹೊಂದಿದ ಮನಸ್ಸಿಗೆ ಎಲ್ಲವೂ ಗೊತ್ತಾಕ್ತದೆ ಅಂದ ಮೇಲೆ ಹಿಂದಿನದ್ದು ಯಾಕೆ ಗೊತ್ತಾಗೋದಿಲ್ಲ.

ಅಜ್ಜ – ಯಾವುದು ಹಿಂದಿನದ್ದು.

ಶಾಂತ – ಆ ಬಂದ ಶಕ್ತಿಯ ಹಿಂದಿನದ್ದು ಯಾಕೆ ಗೊತ್ತಾಗೋದಿಲ್ಲ.

ಅಜ್ಜ – ಆದೆಕ್ಕೆಲ್ಲ ಮನಸ್ಸು ಹೋಗೋದಿಲ್ಲ. ಹೋದ್ರೆ ಗೊತ್ತಾಗ್ಬೋದಷ್ಟೆ. ಆದ್ರೆ ಹೋಗೋದಿಲ್ಲ. ಅದಕ್ಕೆ ಹಿಂದಕ್ಕೆ ಹೋದ ಹಾಗೆ. ಮೆಟ್ಟಲು ಜಾರಿದ ಹಾಗೆ.

ಶಾಂತ – ಇಲ್ಲಪ್ಪ. ಹೋಗಬೇಕು ಅಂತ ಹೇಳಿದ್ದಲ್ಲ. ಗೊತ್ತಾಗ್ಲಿಕ್ಕೆ ಸಾಧ್ಯತೆ ಉಂಟಲ್ವಾ.

ಅಜ್ಜ – ಗೊತ್ತಾಗುವವರಿಗೆ ಸಾಧ್ಯತೆ ಉಂಟು. ಅದಕ್ಕೆ ಹೋದ್ರೆ ಅದೇ ಆಯ್ತು. ಅವನಿಗೆ ಪವಾಡ ಅದು ಇದೂ . . . ಹಾಗೆ ಗೊತ್ತಾಗ್ಲಿಕ್ಕೆ ಸಾಧ್ಯತೆ ಉಂಟ ಇಲ್ಲಿ. ಅದು ಸಾಧ್ಯವೇ ಇಲ್ಲ.

ಶಾಂತ – ಇಲ್ಲಿ ಬಂದ ಮೇಲೆ "ಪರಿವರ್ತನೆ ಹೊಂದಿದ ಜೀವಾತ್ಮ ತಾನೆ ಇಲ್ಲಿಗೆ ಬಂದದ್ದು". ಈ ಮನಸ್ಸು ಬುದ್ಧಿಯ ಮೂಲಕ ಅವನು ತಾನು ಹಿಂದೆ ಇಂಥಾ ದೇಹದಲ್ಲಿದ್ದೆ ಎಂಬ ನೆನಪನ್ನು ಮಾಡಿಕೊಳ್ಳಬಹುದಾ. ಈ ಮನಸ್ಸು ಬುದ್ಧಿಗೆ ಅದು ತಿಳಿತದ.

ಅಜ್ಜ – ಅದು ಆ ಮನಸ್ಸಿಗೆ ಹೊಳಿತದೆ.

ಶಾಂತ – ಈ ಶಕ್ತಿ ಬಂದಿದ್ರಿಂದ ಅದಕ್ಕೆ ಹೊಳೆದದ್ದಲ್ವಾ.

ಅಜ್ಜ – ಇಲ್ಲ ಇದು ಬರುವ ಮುಂಚೆಯೇ ಗೊತ್ತಾಯ್ತು.

ಶಾಂತ – ಬಂದ ಮೇಲೆ ಈ ಮನಸ್ಸು ಬುದ್ಧಿಯನ್ನಿಟ್ಟುಕೊಂಡು ಆ ಶಕ್ತಿಯು ಏನು ಮಾಡಿತು.

ಅಜ್ಜ – ವಿಕಾಸಗೊಳಿಸಿತು.

ಶಾಂತ – ಯಾವುದನ್ನು.

ಅಜ್ಜ – ಇದು ಈ ಮನಸ್ಸು ಆ ಶಕ್ತಿಯಲ್ಲಿ ಕೇಂದ್ರೀಕೃತ ಆದಾಗ ನಾನು ಅಂದ್ರೆ ಅದು ಅಂತ್ಯೇಳಿ ಆಯ್ತು. ಅಂದ್ರೆ ನಾನು ಅಂದ್ರೆ ಶಕ್ತಿ ಅಂತ್ಯೇಳಿ ಆಯ್ತು. ಆ ನಾನು ಯಾರು? ಎಂಬ ವಿಚಾರದಿಂದ ಬಿಡುಗಡೆ ಆಯ್ತು. ಹಾಗಾಗಿ ಮನಸ್ಸೇ ಬಂಧನಕ್ಕೂ ಬಿಡುಗಡೆಗೂ ಕಾರಣ.

ಶಾಂತ – ಆ ಮನಸ್ಸು ಬುದ್ಧಿಶಕ್ತಿಯಲ್ಲಿ ಏಕಾಗ್ರತೆಗೊಳಿಸ್ತಲ್ಲ. ಹಂತ ಹಂತವಾಗಿ ಆಯ್ತಲ್ಲ. ಆ ಹಂತ ಹಂತದಲ್ಲಿ ವ್ಯತ್ಯಾಸಗಳು ಹೇಗಿವೆ. ಅಂದ್ರೆ ಒಂದನೇ ಹಂತಕ್ಕೂ ಎರಡನನೇ ಹಂತಕ್ಕೂ ವ್ಯತ್ಯಾಸ ಏನು.

ಅಜ್ಜ – ತುಂಬ ಕೆಲಸ ಉಂಟು. ತುಂಬ ಉಂಟು.

ಶಾಂತ – ಚೂರು ಹೇಳಿ.

ಅಜ್ಜ – ನೋಡಿ ಆ ಜೀವಾತ್ಮನು (ಸುತ್ತಲೂ ನೋಡುತ್ತಾ) ನೀವೆಲ್ಲ ಕಿವಿ ಕೊಡಬಾರ್ದು ಇದಕ್ಕೆ.

ಶಾಂತ – ಏನೂ ಆಗೋದಿಲ್ಲ ಹೇಳಿ ಅಜ್ಜ.

ಅಜ್ಜ – ಏಕೆಂದ್ರೆ ವೀಕ್‌ನೆಸ್ ಇರೋರು ಕೇಳಬಾರ್ದು. ಹೇಳ್ಳಿಕ್ಕೆ ಬರೋದಿಲ್ಲ. ಈ ದೇಹದಲ್ಲಿ ಮೊದಲಿದ್ದ ಜೀವಾತ್ಮ ಹೋಗುವಾಗ ಈ ಮನಸ್ಸು ಅರಳಿತು. ಅಲ್ಲಿಂದ ಆ ಜೀವ ಶಕ್ತಿ ಹೊರಟು ಹೋಯ್ತು.

ಶಾಂತ – ಈ ಅರಳಿದ ಸೂಕ್ಷ್ಮದೇಹಕ್ಕೆ ದಿವ್ಯ ಶಕ್ತಿ ಬಂತಲ್ಲ. ಅದು ಬಂದ ಮೇಲೆ ಈ ಮನಸ್ಸು ಅರಳಿದ್ದು ಪುನಃ ಮುಚ್ಚಿಕೊಳ್ಳಲಿಲ್ವಾ.

ಅಜ್ಜ – ಇಲ್ಲ ಈ ಮನಸ್ಸು ಆ ಶಕ್ತಿಯನ್ನೇ ನಾನು ಅಂತ ಹೇಳ್ತು.

ಶಾಂತ – ಆ ಶಕ್ತಿ ಹೇಗೆ ಹಂತ ಹಂತವಾಗಿ ವಿಕಾಸ ಆಯ್ತು. ಆ

ಅಜ್ಜ – ಯಾವ್ದು.

ಶಾಂತ – ಆ ಶಕ್ತಿ ಯಾವ ರೂಪದಲ್ಲಿತ್ತು ಬರುವಾಗ. ಬಂದಮೇಲೆ. ಹಂತ ಹಂತವಾಗಿ ವಿಕಾಸ ಆಯ್ತಲ್ಲಾ, ಹೇಗೆ ಆಯ್ತು ಅದು. ಅಂದ್ರೆ ದಪ್ಪಗಿದ್ದದ್ದು ತೆಳ್ಳಗಾಗುತ್ತಾ ಹೋಯಿತಾ ಅಥವ ಕಪ್ಪಗಿದ್ದದ್ದು ಬೆಳ್ಳಗಾಯಿತು ಅನ್ನುವ ಹಾಗೆಯೋ ಹೇಗೆ.

ಅಜ್ಜ – ಹೌದು, ಕಪ್ಪಗಿದ್ದದ್ದು ಬೆಳ್ಳಗಾಯ್ತು.

ಶಾಂತ – ಅಂದ್ರೆ ಆ ಆವರಣವು ಅಂದ್ರೆ ಕಾರಣ ಶರೀರವು ಕಪ್ಪಾಗಿತ್ತು.

ಅಜ್ಜ – ಅದು ಇಲ್ಲಿಗೆ ಬರುವಾಗ ಸ್ವಲ್ಪ ಬಿಳಿಯಾಗೆ ಇತ್ತು. ಕಪ್ಪಗಿರುವುದು ಜೀವಾತ್ಮನ ಕಾರಣ ಶರೀರ. ಇಲ್ಲಿ ಬಂದ ಶಕ್ತಿಯು ಕಾರಣ ಶರೀರ ಬೆಳ್ಳಗೆ ಇತ್ತು. ಆ ಬಿಳಿಯು ವಿಕಾಸವಾಯ್ತು.

ಶಾಂತ – ಅದು ಯಾವ ಆಕಾರದಲ್ಲಿತ್ತು ಆ ಶಕ್ತಿ.

ಅಜ್ಜ – ಅದು ಹೇಳಿ ಆಗಿದೆ. ವಾಪಸ್ ವಾಪಾಸ್ ಹೇಳೋದಿಲ್ಲ. ಮನಸ್ಸು ಸ್ವಲ್ಪ ಅದೇ ವಿಚಾರದಲ್ಲಿದ್ರೆ ಗೊತ್ತಾಕ್ತದೆ. ಎಲ್ಲರೂ ಇದನ್ನು ಕೇಳಬಾರದು. ಇದನ್ನೇ ಅನುಕರಣೆ ಮಾಡಿಬಿಟ್ಟಾರು.

ಶಾಂತ – ಅದು ಹೇಗೆ ಅನುಕರಣೆ ಮಾಡಿದ್ರೆ ಬರ್ತದಾ ಅದು.

ಅಜ್ಜ – ಅದು ಹಾಗೆ ಉಂಟು. ಹೇಳ್ಳಿಕ್ಕಾಗೋದಿಲ್ಲ . . .

ಪರಮಾತ್ಮ ಅಂದರೆ ಮಾಯಾ ಶಕ್ತಿ ಅದರೊಳಗೆ ಬೆಳಕುಂಟು. ಮಾಯಾ ಶಕ್ತಿಯಿಂದ ಕೂಡಿದ ಆ ಬೆಳಕನ್ನೇ ಪರಮಾತ್ಮ ಅಂತ ಹೇಳ್ತಾರೆ.

ಶಾಂತ – ಶಾಸ್ತ್ರಗಳಲ್ಲಿ ಹೇಳ್ತದೆ, ಜೀವಾತ್ಮನು ಅಂದ್ರೆ ಅವಿದ್ಯೆಯಿಂದ ಕೂಡಿದ ಚೈತನ್ಯ. ಅದೇ ಚೈತನ್ಯವು ಅಂದರೆ ನೀವು ಹೇಳುವ ಬೆಳಕು ಮಾಯಯಿಂದ ಕೂಡಿದಾಗ ಪರಮಾತ್ಮ ಅಂತ ಕೆಲವರು ಪ್ರತಿಬಿಂಬವಾದವನ್ನು ಇಲ್ಲಿ ಹೇಳ್ತಾರೆ. ಈಗ ಮೂರನೇ ವಲಯದಿಂದ ಒಂದು ಶಕ್ತಿ ಬಂತು ಅಂತ ಹೇಳಿದ್ರಲ್ಲಾ ಅದು ಮಾಯಾವರಣದಲ್ಲಿ ಪ್ರತಿಬಿಂಬಿಸಿದ ಆತ್ಮನು ಬಂದದ್ದಾ ಇಲ್ಲಿ.

ಅಜ್ಜ – ಪ್ರತಿಬಿಂಬ ಅಂತ ನಾವು ಹೇಳೋದಿಲ್ಲ. ನಾವು.

ಶಾಂತ – ಮತ್ತೆ.

ಅಜ್ಜ – ಆತ್ಮನಲ್ಲಿ ಆ ಮಾಯಾಶಕ್ತಿ ಉಂಟಾಯಿತು. ಆ ಉಂಟಾದದ್ದರಲ್ಲಿ ಆ ಬೆಳಕು ಉಂಟು. ಅದು ಅದರ ಒಳಗೂ ಹೊರಗೂ ಉಂಟು.

ಶಾಂತ – ಹೌದು. ಇದೇ ಸರಿ ಅಜ್ಜ. ಪ್ರತಿಬಿಂಬವಾದವು ಅಷ್ಟು ಸರಿ ಹೊಂದೋದಿಲ್ಲ. ಶಾಸ್ತ್ರದಲ್ಲಿಯೂ ಕೂಡ ಮೊದಲು ಪ್ರತಿಬಿಂಬ ವಾದವನ್ನು ಹೇಳಿ ನಂತರ ಅದನ್ನು ಅಲ್ಲಗೆಳೆದು ಮಾಯಾವಚ್ಛಿನ್ನ ಚೈತನ್ಯ ಅಂತ ಹೇಳಿದ್ದಾರೆ.

ಅಜ್ಜ – ಅಂದ್ರೆ.

ಶಾಂತ – ಮಾಯೆಯಿಂದ ಕೂಡಿದ ಚೈತನ್ಯ ಅಂತ.

ಅಜ್ಜ – ಹಾಂ sss ನೋಡು. ಯಾಕೇಂದ್ರೆ ಆತ್ಮನಿಗೆ ಪ್ರತಿಬಿಂಬ ಇಲ್ಲ. ನೋಡು ಘಟಾಕಾಶದ ಉದಾಹರಣೆ ನೀವೆಲ್ಲ ಹೇಳ್ತೀರಲ್ಲ. ಘಟ ಅಂದ್ರೆ ಕಾರಣದೇಹ. ಅದರ ಒಳಗೆ ಆಕಾಶ.

ಶಾಂತ – ಆಕಾಶ ಒಳಗೂ ಉಂಟು ಹೊರಗೂ ಉಂಟು.

ಅಜ್ಜ – ಹೌದು. ಆ ಘಟವು ಒಡೆದಾಗ ಒಳಗೂ ಹೊರಗೂ ಒಂದೇ ಆಯ್ತು. ಆವಾಗ ಮಾತ್ರ ಒಂದೇ ಆಯ್ತು ಅಂತ ಹೇಳೋದು. ಈ ಘಟ ಅಂತ ಬಂದ ಕಾರಣ ಒಂದಾಯ್ತು ಅಂತ ಹೇಳೋದು. ಅಲ್ವಾ. ಇಲ್ಲದಿದ್ರೆ ಒಂದಾಯ್ತು ಎನ್ನುವುದು ಇಲ್ಲ. ಇದೆಲ್ಲ ಶಬ್ದದಲ್ಲಿ ಹೇಳ್ಳಿಕ್ಕೆ ಬರೋದೇ ಇಲ್ಲ. ಇದನ್ನು ಶಬ್ದದಿಂದ ಹೇಗೆ ವರ್ಣನೆ ಕೊಡೋದು.

ಶಾಂತ – ಈಗ ಆ ಆವರಣ ನಾಶ ಮಾಡಿಕೊಂಡ್ರೆ ಬಂಧನದಿಂದ ಬಿಡುಗಡೆ ಆಯ್ತು ಅನ್ನೋದು ಸರಿ. ಆದರೆ ಐಕ್ಯತೆ ಅನ್ನುವ ಒಂದು ದಾರಿ ಇದೆ ಅಂತ ಹೇಳ್ತಾರಲ್ಲ. ಜೀವಾತ್ಮನು ಪರಮಾತ್ಮನಲ್ಲಿ ಐಕ್ಯನಾಗಬಹುದು.

ಅಜ್ಜ – ಹೌದು ಆದ್ರೆ ಅದು ಪೂರ್ಣ ಆಗ್ಲಿಲ್ಲ.

ಶಾಂತ – ಪೂರ್ಣನಾಗದಿದ್ರೂ, ಐಕ್ಯನಾಗಿದ್ರಿಂದ ಕೊನೆಗೆ ಪೂರ್ಣತೆಗೆ ಹೋಕ್ತಾನಲ್ಲ.

ಅಜ್ಜ – ಯಾವ್ದು.

ಶಾಂತ – ಜೀವಾತ್ಮನು ಪರಮಾತ್ಮನಲ್ಲಿ ಐಕ್ಯನಾದ. ಈಗ ನದಿ ಸಾಗರವನ್ನು ಸೇರಿತು. ಸಾಗರವೇ ಆಯ್ತು. ಸಾಗರ ಒಂದು ದಿನ ಇಲ್ಲದೆ ಆಗುವಾಗ ಅದರಲ್ಲಿ ಸೇರಿದ ನದಿಗಳು ಇಲ್ಲವಾಗುತ್ತೆ ಅಲ್ವಾ.

ಅಜ್ಜ – ಹೌದು.

ಶಾಂತ – ಹಾಗಾದ್ರೆ ಈ ಐಕ್ಯರಾದವರನ್ನು ತನ್ನೊಡನೆ ಮುಕ್ತಗೊಳಿಸುವವನು ಪರಮಾತ್ಮ. ಹೀಗಿರುವಾಗ ನೀವು ಹೇಳ್ತೀರಾ ಪರಮಾತ್ಮ ಏನೂ ಇಲ್ಲ ಅಂತ. ಹಾಗಾದ್ರೆ ಅವನು . . .

ಅಜ್ಜ – ನಿಲ್ಲು ನಿಲ್ಲು. ಹೇಳ್ತದೆ. ಇಗತ್ತಿಗಾಗಿ ಸಂಪೂರ್ಣ ಉಂಟು. ಈ ಆತ್ಮ ವಿಚಾರಕ್ಕೆ ಹೋಗುವಾಗ ಅಲ್ಲಿ, ಅಲ್ಲಿ ಮಾತ್ರ ಪರಮಾತ್ಮನ ನಿರಾಕರಣೆ.

ಶಾಂತ – ಜಗತ್ತಿಗಾಗಿ ಏನು.

ಅಜ್ಜ – ಜಗತ್ತಿಗಾಗಿ ಪರಮಾತ್ಮ ಇದ್ದಾನಲ್ಲ.

ಶಾಂತ – ಜಗತ್ತಿಗಾಗಿ ಪರಮ್ಮಾತ್ಮ ಎಂಥವನು.

ಅಜ್ಜ – ಮಾಯಾಶಕ್ತಿ. ಆ ಮಾಯಾ ಶಕ್ತಿ ಒಳಗೆ ಆತನಿದ್ದಾನೆ.

ಶಾಂತ – ಆ ಮಾಯಾ ಶಕ್ತಿಗೆ ಪವರ್ ಎಷ್ಟುಂಟು.

ಅಜ್ಜ – ಆ ಆತ್ಮನಿಂದಾಗಿ ಅದಕ್ಕೆ ಪವರ್ ಉಂಟು.

ಶಾಂತ – ಏನು ಪವರ್ ಉಂಟು.

ಅಜ್ಜ – ಏನೂ ಪವರ್ ಉಂಟು.

ಶಾಂತ – ಅಂದ್ರೆ ಏನು ಬೇಕಾದ್ರೂ ಮಾಡಬಹುದಾ.

ಅಜ್ಜ – ಹಾಗೆ ಸಿಕ್ಕಾಪಟ್ಟೆ ಮಾಡೋದಿಲ್ಲ. ಏನೂ ಮಾಡಬಹುದು ಅಂದ್ರೆ ಏನೂ ಮಾಡೋದಿಲ್ಲ.

ಶಾಂತ – ಹಾಗಾದ್ರೆ ಜಗತ್ತನ್ನ ಸೃಷ್ಟಿ ಮಾಡ್ತಾನೆ, ಅವತರಿಸಿ ಬರ್ತಾನೆ, ಇದೆಲ್ಲ.

ಅಜ್ಜ – ಅದೆಲ್ಲ ಮಾಯೆ. ಆ ಲೆಕ್ಕದಲ್ಲಿ ಆದ್ರೆ ವರ್ಣನಾತೀತ ಈ ಜಗತ್ತು ಕಣ್ಣೀಗೆ ಕಾಣೋದೇ ಇಲ್ಲ. ಸೃಷ್ಟಿ ಮಾಡಿದವನ ಅಸ್ತಿತ್ವವೇ ಇಲ್ಲದಾಗುವಾಗ ಇನ್ನು ಜಗತ್ತಿಗೆ ಮಹತ್ವ ಎಲ್ಲುಂಟು ಹಾಗಾದ್ರೆ. ಮನಸ್ಸೆ ಇಲ್ಲ. ಅಂಥಾ ಮನಸ್ಸಿಗೆ ಇದು ಸತ್ಯ ಅಂತ್ಹೇಳಿ ಕಾಣುವಂಥಾದ್ದು ಸರಿಯಾ. ವಿಪರೀತ ಪ್ರಶ್ನೆ ಮಾಡಬೇಡ. ಇದು ಸರಿಯಾ.

ಶಾಂತ – ಸರಿ.

ಅಜ್ಜ – ನಮ್ಮದು ಬಾರೀ ಗಡ್ಡ್ ಉಂಟು. ಯಾವುದನ್ನು ನಾವು ಒಪ್ಪೋದಿಲ್ಲ. ಇದೆಲ್ಲ ಮನಸ್ಸಿಗೆ ಕಾಣುವಂಥಾದ್ದು.

ಶಾಂತ – ನೀವು ಹೇಳ್ತೀರ ನಾವು ಕಳುಹಿಸಲ್ಪಟ್ಟವರು, ಕಳುಹಿಸಿದವನು ಬೇರೆ ಅಲ್ಲ, ಕಳುಹಿಸಲ್ಪಟ್ಟವನು ಬೇರೆ ಅಲ್ಲ. ಆದರೂ ನಾವು ಕಳುಹಿಸಲ್ಪಟ್ಟವರು.

ಅಜ್ಜ – ಇದು ಈ ಪ್ರಪಂಚಕ್ಕಾಗಿ ಹೀಗೆ ಹೇಳ್ಬೇಕಾಕ್ತದೆ. ಹಾಗೆ ಹೇಳದಿದ್ರೆ ಇದು ಸ್ವಲ್ಪ ಅಹಂಕಾರದ ಹಾಗೆ ಕಾಣ್ತದೆ. ಹಾಗಾಗಿ ಹಾಗೆ ಹೇಳೋದು. ಯಾರು ಕಳುಹಿಸಲ್ಪಟ್ಟವರು? ಆ್ಞಂ! ಅವನೇ ಖುದ್ದು ಬಂದ.

ಶಾಂತ – ಬರ್ಲಿಕ್ಕೆ ಏನು ಕಾರಣ. ಬರಬೇಕಾದ್ರೆ ಏನೋ ಒಂದು ಕಾರಣ ಇರಲೇ ಬೇಕಲ್ಲ. ಸುಮ್ಮ ಸುಮ್ಮನೆ ಅವ ಬರೋದಿಲ್ಲ. ಏನು ಕಾರಣಕ್ಕಾಗಿ ಬಂದ ಅವನು.

ಅಜ್ಜ – ಈ ಪ್ರಪಂಚಕ್ಕೆ ಸತ್ಯವನ್ನು ತೋರಿಸಿಕೊಡ್ಲಿಕ್ಕಾಗಿ. ಸತ್ಯ ಉಂಟು ಅಂತ್ಹೇಳಿ ತೋರಿಸಿಕೊಡ್ಲಿಕ್ಕೆ ಮಾದರೀ ರೂಪವಾಗಿ ಬಂದದ್ದು.

ಶಾಂತ – ನಮ್ಮ ದೇಶದಲ್ಲಿ ಅಂದ್ರೆ ಈ ಪ್ರಪಂಚದಲ್ಲಿ ಎಷ್ಟೋ ಮಹಾತ್ಮರು ಆಗಿ ಹೋಗಿದ್ದಾರೆ. ಎಲ್ಲರೂ ಸತ್ಯವನ್ನು ಕಂಡವರೆ. ಅವರು ಹೇಳಿರುವುದೇ ಈ ಜಗತ್ತಿಗೆ ಸಾಲದ ಹಾಗಾದ್ರೆ.

ಅಜ್ಜ – ಅದೆಲ್ಲ ಸಾಲದು, ಸಾಲದು. ಗ್ಯಾರಂಟಿ ಸಾಲದು ಅಂತ ಹೇಳ್ತದೆ ನಾವು. ನಮಗೆ ಅಷ್ಟು ಧೈರ್ಯ ಬರ್ತದೆ ಇಲ್ಲಿ.

ಶಾಂತ – ಸತ್ಯವನ್ನು ಜಗತ್ತಿಗೆ ತೋರಿಸಿಕೊಡುವುದು ಅಂದ್ರೆ ಏನಜ್ಜ.

ಅಜ್ಜ – ಸತ್ಯ ಅಂದ್ರೆ ಏನು ಅಂತ್ಹೇಳಿ ಕೃತಿಯಲ್ಲಿ ತೋರಿಸುವುದು. ಇದೆಲ್ಲ ಕೃತಿಗೆ ಸಂಬಂಧಪಟ್ಟದ್ದು.

ಶಾಂತ – ಈಗ ನೀವು ೫೨ನೇ ಇಸವಿಯಲ್ಲಿ ಬಂದದ್ದು. ಇಲ್ಲಿವರೆಗೆ ಇಷ್ಟೆಲ್ಲಾ ಹೇಳಿದ್ರೂ ಸಹ, ಕೃತಿಯಲ್ಲಿದ್ದರೂ ಸಹ, ನೀವೇ ಹೇಳುವ ಹಾಗೆ "ಒಬ್ಬನಿಗೆ ಇದು ಅರ್ಥ ಆದ್ರೆ ಸಾಕು" ಅಂತ, ಒಬ್ಬನಾದ್ರೂ ಇದ್ದಾನಾ ಈ ಜಗತ್ತಿನಲ್ಲಿ.

ಅಜ್ಜ – ಇದೆಲ್ಲ ಮುಂದೆ ಗೊತ್ತಾಗುತ್ತೆ. ಯಾಕೆಂದ್ರೆ, ಸತ್ಯ ಶೋಧಕನು ಸತ್ಯವೇ ಆಗುತ್ತಾನೆ. ಇಲ್ಲಿ ಸತ್ಯ ಬೆಳಕು ಬದುಕು ಜೀವನದ ಮೌಲ್ಯಗಳು ಅಂತ ಹೇಳ್ತದೆ. ಇದು ಸತ್ಯ ಶೋಧಕನಿಗೆ ಮಾತ್ರ ಸಂಬಂಧ ಪಟ್ಟದ್ದು.

ಶಾಂತ – ಜೀವಾತ್ಮನೂ ಇಲ್ಲ, ಪರಮಾತ್ಮನೂ ಇಲ್ಲ, ಎಂದು ಹೇಳಿದ ನೀವು, ಜಗತ್ತಿಗಾಗಿ ಸತ್ಯವನ್ನು ತೋರಿಸಿಕೊಡ್ಲಿಕ್ಕಾಗಿ ನಾವು ಬಂದವರು ಅಂತ ಹೇಳಿದ್ದಿರಲ್ಲ. ಈ ಸತ್ಯವನ್ನು ಅಂದ್ರೆ ಜೀವಾತ್ಮನೂ ಇಲ್ಲ, ಪರಮಾತ್ಮನೂ ಇಲ್ಲ ಅನ್ನೋದನ್ನ ಹೇಗೆ ತೋರಿಸಿಕೊಡ್ತೀರ ನೀವು.

ಅಜ್ಜ – ಅದನ್ನ ಜನರೇ ಕಂಡು ಹಿಡೀತಾರೆ.

ಶಾಂತ – ಕಂಡು ಹಿಡಿಯೋದಾಗಿದ್ರೆ, ಇಷ್ಟು ವರ್ಷ ಯಾಕೆ ಇನ್ನು ಕಂಡ್ಹಿಡ್ದಿಲ್ಲ.

ಅಜ್ಜ – ಇದೆಲ್ಲ ಎಂಥದ್ದು ಇಷ್ಟು ವರ್ಷ ಅನ್ನೋದು. ನಮಗೆ ಇನ್ನು ಒಂದು ಸೆಕೆಂಡು ಆಗಿಲ್ಲ. ಕಂಡು ಹಿಡೀತಾರಪ್ಪ. ಯಾಕೆ ಅವಸರ ಮಾಡ್ತೀರಿ ಹೀಗೆ.

ಶಾಂತ – ಯಾವಾಗ ಕಂಡುಹಿಡೀತಾರಜ್ಜ.

ಅಜ್ಜ – ಈ ವರ್ಷಗಳು ನಮಗೆ ಲೆಕ್ಕವೇ ಇಲ್ಲ. ಯಥಾರ್ಥವಾಗಿ ನಾವು ಹೇಳೋದಪ್ಪ.

ಶಾಂತ – ನಿಮಗೆ ವಯಸ್ಸು ಇಲ್ಲದಿದ್ರೂ, ಈ ದೇಹಕ್ಕೆ ನೋಡಿ ಎಷ್ಟು ವಯಸ್ಸಾಗಿದೆ. ಇನ್ನು ಎಷ್ಟು ವರ್ಷ ಬದುಕೀತು ಈ ದೇಹ.

ಅಜ್ಜ – ಸತ್ಯ ಬೆಳಕಿಗೆ ಬರುವಲ್ಲಿವರೆಗೆ ಇದೆಲ್ಲ ಗೊಂದಲ.

ಶಾಂತ – ನಿಮಗೆ ವಯಸ್ಸಿಲ್ಲ. ಅಂದ್ರೆ ಬಂದ ಶಕ್ತಿಗೆ ವಯಸ್ಸಿಲ್ಲ. ಆದ್ರೆ ನೀವು ಬಂದಾಗ ದೇಹ ಹೇಗಿತ್ತು. ಈಗ ಈ ದೇಹ ಹೇಗಿದೆ ನೋಡಿ. ಇನ್ನು ಈ ದೇಹ ಎಷ್ಟು ವರ್ಷ ಇರ್ತದೆ. ಈಗಲೇ ಈ ದೇಹಕ್ಕೆ ವಯಸ್ಸಾಗಿದೆ.

ಅಜ್ಜ – ನೀವೆಲ್ಲ ನಿಮ್ಮ ನಿಮ್ಮ ಕೆಲಸ ಮಾಡಿ (ಕುಳಿತವರನ್ನು ನೋಡಿ)

ಶಾಂತ – ಇನ್ನು ಜಗತ್ತಿಗೆ ಸತ್ಯವನ್ನು ಯಾವಾಗ ತೋರಿಸುವುದು. ಈ ದೇಹ ಇರುವಾಗ್ಲೇ ಆಗ್ಬೇಕಲ್ಲ. ಈ ದೇಹಕ್ಕೆ ಈಗಾಗಲೇ ವಯಸ್ಸಾಯ್ತು.

ಅಜ್ಜ – ಜಗತ್ತಿಗೆ ತೋರಿಸಿಕೊಡುವಂಥಾದ್ದಲ್ಲ ಶಾಂತಾ. ಜಗತ್ತು ಅದನ್ನು ಕಂಡುಹಿಡಿಯುವಂಥಾದ್ದು.

ಶಾಂತ – ಕಂಡುಹಿಡಿಯೋದಾಗಿದ್ರೆ ಆಗಲೇ ಇಷ್ಟು ವರ್ಷ ಆಯ್ತು. ಇನ್ನು ಕಂಡು ಹಿಡಿದೇ ಇಲ್ವಲ್ಲ ಅಜ್ಜ.

ಅಜ್ಜ – ಅಯ್ಯೋ ದೇವಾ (ಕುಳಿತವರನ್ನು ನೋಡಿ) ಇದೆಲ್ಲ ನಿಮಗಾರಿಗೂ ಅನ್ವಯಿಸೋದಿಲ್ಲ.

ಶಾಂತ – ಯಾವಾಗ ಆಗುತ್ತಜ್ಜ.

ಅಜ್ಜ – ಹ. ಹ. ಹ.

ಶಾಂತ – ಬರೀ ಸತ್ಯವನ್ನು ಜಗತ್ತಿಗೆ ಕೊಡ್ಲಿಕ್ಕಾಗಿ ಬಂದದ್ದೊ ಅಥವ ಜಗತ್ತಿಗೆ ಸಂಬಂಧಪಟ್ಟ ಬೇರೆ ಏನಾದ್ರೂ ಕೆಲಸ ಇದೆಯೋ.

ಅಜ್ಜ – ಹಾಗೆ ಕೇಳಿದ್ರೆ ಕಷ್ಟ ಆಕ್ತದೆ ಶಾಂತಾ ನಮಗೆ ಹೇಳ್ಳಿಕ್ಕೆ ಬಾಳ ಕಷ್ಟ ಆಕ್ತದೆ. ಶಬ್ದಗಳಿಂದ ಹೇಳ್ಳಿಕ್ಕೆ ಬರೋದಿಲ್ಲಪ್ಪ. ಇದೆಲ್ಲ ಹೇಗೆ ಅಂತ ಕೇಳಿದ್ರೆ, ಮೌನದಿಂದ ಆಗುವಂಥಾದ್ದು. ಕೆಲವರು ಆಧ್ಯಾತ್ಮ ಜೀವಿಗಳು ನೋಡಿ ಮೌನದಿಂದಿದ್ರು ಅಲ್ವಾ. ಹಾಗೆ ಇದೆಲ್ಲ ಮೌನದಿಂದಾಗುವಂಥಾದ್ದು. ಮೌನವೇ ಪ್ರಾಧಾನ್ಯ ಅಂತ ಕಾಣ್ತದೆ. ಅದ್ರಲ್ಲೇ

ಕೆಲಸಗಳಿರುವಂಥಾದ್ದು. ಈ ಭಾಷಣ, ವೇದಾಂತ, ಉಪನ್ಯಾಸ ಮಾಡುವವರಿದ್ದಾರಲ್ಲ, ಅವರಿಂದೆಲ್ಲ ಏನೂ ಆಗೋದಿಲ್ಲ. ಇದು ಬರೇ ಮೌನದಿಂದ ಆಗೋ ಕೆಲಸ ಇದು.

ಶಾಂತ – ಮತ್ತೆ ಏನೂ ಬದಲಾವಣೆ ಕಂಡು ಬರ್ತಾ ಇಲ್ಲಲ್ಲ ಅಜ್ಜ.

ಅಜ್ಜ – ಕಂಡು ಬರುವಾಗ ಬರ್ತದೆ ಅದು.

ಶಾಂತ – ಯಾವಾಗ ಕಂಡು ಬರ್ತದೆ.

ಅಜ್ಜ – ನೋಡುವ ಒಂದು ಪ್ರಶ್ನೆ ಕೇಳುವುದು ಬೇಡಪ್ಪ. ಅದು ಈ ಮನಸ್ಸಿಗೆ ಗೊತ್ತಾಗೋದಿಲ್ಲ.

ಶಾಂತ – ಸತ್ಯವನ್ನು ಜಗತ್ತಿಗೆ ತೋರಿಸ್ಲಿಕ್ಕೆ ಬಂದದ್ದು ಅಂತ ಹೇಳಿದ್ರಲ್ಲಾ. ಎಲ್ರಿಗೂ ಆ ಸತ್ಯ ಗೊತ್ತಾಕ್ತದಾ.

ಅಜ್ಜ – ಛೆ, ಹಾಗೆಲ್ಲ ಎಲ್ರಿಗೂ ಬರೋದಿಲ್ಲ. ಕೆಲವರಿಗೆ ಮಾತ್ರ.

ಶಾಂತ – ಕೆಲವರಿಗೆ ಮಾತ್ರ ಅನ್ನೋದಾದ್ರೆ ಶಂಕರರು ಸ್ಪಷ್ಟವಾಗಿ ಹೇಳಿದ್ದಾರಲ್ಲ, ಅದೇ ಸಾಕಾಗೋದಿಲ್ವಾ.

ಅಜ್ಜ – ಆದ್ರಿಂದ ಶಂಕರರದ್ದು ಈವತ್ತಿಗೂ ಉಂಟಲ್ಲ.

ಶಾಂತ – ಅದೇ ಸಾಕಲ್ಲ ಹಾಗಾದ್ರೆ. ಮತ್ಯಾಕೆ ಅವ ಜಗತ್ತಿಗೆ ಬರ್ತಾನೆ.

ಅಜ್ಜ – ಅದು ಆವಾಗವಾಗ ಬರ್ತಾನೆ ಅವನು.

ಶಾಂತ – ಬರೀ ಸತ್ಯವನ್ನು ಹೇಳ್ಲಿಕ್ಕಾಗಿಯೇ ಆವಾಗವಾಗ ಬರೋದ.

ಅಜ್ಜ – ಅಲ್ಲ ಅವ ಅದನ್ನು ಆಚರಣೆಯಲ್ಲಿ ತಂದು ತೋರಿಸ್ತಾನೆ. ವ್ಯವಹಾರದಲ್ಲಿದ್ದುಕೊಂಡು ತೋರಿಸುವಂಥಾದ್ದು. ವ್ಯವಹಾರದಲ್ಲಿ ಪಾರಮಾರ್ಥಿಕವನ್ನು ತೋರಿಸುವಂಥಾದ್ದು.

ಶಾಂತ – ಹಾಗಾದ್ರೆ ನಮಗೆ ಗಾಂಧೀಜಿಯೇ ಸಾಕು. ಅವರು ವ್ಯವಹಾರದಲ್ಲಿ ಅಂದ್ರೆ ರಾಜಕೀಯದಲ್ಲಿದ್ದುಕೊಂಡು, ಸತ್ಯ ಅಹಿಂಸೆಯನ್ನು ಪಾಲಿಸಿದ್ರಲ್ಲ. ಅದೇ ಸಾಕು. ಮತ್ತೆ ಈ ಶಕ್ತಿ ಬಂದದ್ದು ಯಾಕೆ?

ಅಜ್ಜ – ನೀನು ನಮ್ಮನ್ನು ಕಟ್ಟಿಹಾಕ್ತೀಯಾ ಮಾತಲ್ಲಿ. ಹ. ಹ. ಹ.

ಶಾಂತ – ಹೇಳಿ ಈಗ.

ಅಜ್ಜ – ಆಗೋದಿಲ್ಲ ಶಾಂತಾ ಪ್ಲೀಸ್. ಹೇಳ್ಲಿಕ್ಕೆ ಕಷ್ಟ ಆಕ್ತದೆ.

*****

ಮಂಜು ಮನೆ ಬೆಂಗಳೂರು. 10-05-2000

ಡಾ।। ಜಯಲಕ್ಷ್ಮಿ ಅವರೊಡನೆ ಸಂಭಾಷಣೆ.

ಅಜ್ಜ – ಕನಸಿನಿಂದ ಜಾಗೃತಾವಸ್ಥೆಗೆ ಹೋದಾಗ ಇದು ಕನಸು ಎಂದು ಗೊತ್ತಾಕ್ತದೆ. ಹಾಗೆ ಈ ಜಾಗೃತ್ತಿನಿಂದ ನಿಜವಾದ ಜಾಗೃತಾವಸ್ಥೆಗೆ ಹೋದಾಗ ಈ ಪ್ರಪಂಚ ಅಸತ್ಯ ಎಂಬುದು ಗೊತ್ತಾಕ್ತದೆ. ನಾವು ಸಾಕ್ಷಿರೂಪವಾದಾಗ ಮಾತ್ರ ಇದನ್ನ ತಿಳೀಲಿಕ್ಕೆ ಸಾಧ್ಯ.

ಒಬ್ಬರು – ಅಷ್ಟಾವಕ್ರರು ಒಂದೇ ಮಾತಿನಲ್ಲಿ ಹೇಳಿದ್ರು ಅಹಂಕಾರದಿಂದ ಹಿಡಿದು ಎಲ್ಲಾ ಲೋಕದವರೆಗೆ ಇರೋದು ವಿಷಯಗಳೆ. ಅಹಂಕಾರವನ್ನ ಅಳಿಸಬೇಕಾದ್ರೆ ವಿಷಯಗಳನ್ನ ಮರೀಬೇಕು. ಸಾಕ್ಷಿಗಳು ನೆಲೆಯಾಗಿ ನಿಲ್ಲಬೇಕು. ನಿನಗೇನಾದ್ರು ಆ ಆನಂದ ಬೇಕು ಅಂತ ಅನ್ನೋದಾದ್ರೆ ಆ ರೀತಿ ಆಗ್ಬೇಕು. ಅದಿಕ್ಕೆ ಈ ಅನುಭವಸ್ತರ ಮಧ್ಯದಲ್ಲೇ ಇರಬೇಕು. ಆತ್ಮಾನುಭವಿಗಳು ಯಾರಿದ್ದಾರೋ, ಅವರ ಮಧ್ಯದಲ್ಲಿ ಇದ್ರೆ ಮಾತ್ರ ಹಾಗೆ ಮುಂದು ಮುಂದಕ್ಕೆ ಹೋಗ್ಬಹುದೇ ವಿನಾ, ವಿಷಯ ಸಂಗದಿಂದ ಆಗೋದಿಲ್ಲ. ಅದು ಹಿಂದೆ ಹಿಂದಕ್ಕೆ ಹೋಕ್ತದೆ. ಅದಕ್ಕೆ ಆತ್ಮ ಸಾಕ್ಷಾತ್ಕಾರ ಆದವರಿದ್ರೆ ಅವರೊಟ್ಟಿಗಿದ್ರೆ ಬೆಂಕಿ ಮಧ್ಯದಲ್ಲಿದ್ದ ಹಾಗೆ. ಅದಕ್ಕೆ ತಮ್ಮ ಜ್ಯೋತಿಯನ್ನ ಹತ್ತಿಸಿಕೊಳ್ಳೊದಕ್ಕೆ ಆತ್ಮ ಜ್ಞಾನಿಗಳನ್ನ ಹುಡುಕಿಕೊಂಡು ಹೋಕ್ತಾ ಇದ್ರು. ಆದ್ರಿಂದ ಅವರ ಸಂಗ ಬೇಕು.

ಅಜ್ಜ – ಅವ್ರು ಸಿಕ್ಕಬೇಕಲ್ಲಪ್ಪ. ಎಲ್ಲಿದ್ದಾರೆ ಏನು ಅಂತ್ಹೇಳಿ ಹುಡುಕುವುದು.

ಒಬ್ಬರು – ಹುಡುಕ್ಕೊಂಡು ಬಂದ್ವಿ ನೋಡಿ. ಒಬ್ರಿದ್ದಾರೆ ಇಲ್ಲಿ ಅಂತ ತಿಳೀತು. ಓಡಿ ಬಂದ್ವಿ.

ಅಜ್ಜ – ಓಹೋ. ಇಲ್ಲಿರೋದ್ಯಾರು, ಬಂದವರ್‍ಯಾರು. ಎಲ್ಲರ ಹಾಗೆ ನಾವು ಸರಿಸಮಾನ ನೋಡಿ. ನಾವು ನಿಮ್ಮ ಹಾಗೆ ಬಟ್ಟೆ ಹಾಕಿಕೊಂಡದೆ. ಊಟ ಮಾಡ್ತದೆ. ಕಾಪಿ ಕುಡಿತದೆ. ಆ್ಞಂ.

ಒಬ್ಬರು – ಒಂದು ಸಣ್ಣ ಮಾತು.

ಅಜ್ಜ – ಏನು.

ಒಬ್ಬರು – ಅನುಭವ ಬೇಕು ಅಂತ ತಮ್ಮ ಹತ್ರ ನಾ ಬಂದಿನಿ. ಯಾಕೆಂದ್ರೆ ಮೊದಲು ದೀಪ ಉರೀತಿದ್ರೆ ಇನ್ನೊಂದೀಪ ಹಚ್ಬೋದು. ನಿಮ್ಮಿಂದ ನಾನು ಹಚ್ಚಿಕೊಂಡದ್ದಕ್ಕೆ ಆ ದೀಪಕ್ಕೆ (ಅಜ್ಜನನ್ನು ತೋರಿಸಿ) ಲಾಭವೇ ಹೊರತು ನಷ್ಟವೇನಿಲ್ಲ. ಸ್ವಲ್ಪ ನಮ್ಗೂ ಹಚ್ಚಿಸಿ ಕಳಿಸಿಬಿಡಿ. ನಾವು ಹಾಗೆ ಇದ್ದುಬಿಡ್ತೀವಿ.

ಅಜ್ಜ – ಅದು ಹಚ್ಚಿಸಿಕೊಳ್ಳುವವನ ಕೆಲಸ. ಅದು ಅವನ ಕೈಯಲ್ಲಿದೆ. ನೋಡಿ ಈಗ ದೀಪ ಉರೀತಾ ಉಂಟು ಅಂತ ಗ್ರಹಿಸಿಕೊಳ್ಳುವ ನಾವೀಗ, ಆ್ಞಂ. ಹಚ್ಚಿಸಿಕೊಳ್ಳೊದಾದ್ರೆ ಇಲ್ಲಿಂದ ಹೀಗೆ ಬಂದು ಹತ್ತಿಸಿಕೊಳ್ಳಬೇಕು. ಅದು ಅದರ ಪಾಡಿಗೆ ಉರಿತಾ ಇದೆ. ಅದಕ್ಕೆ ಗೊತ್ತೇ ಇಲ್ಲ. ಹತ್ತಿಸಿಕೊಂಡ್ರೂ ಅದಕ್ಕೆ ಗೊತ್ತೇ ಇಲ್ಲ.

ಒಬ್ಬರು – ಪ್ರತಿಯೊಬ್ಬ . . .

ಅಜ್ಜ – ಆಂ. ನಿಲ್ಲಿ ಅಷ್ಟೆ ಹೇಳ್ತದೆ.

ಒಬ್ಬರು – ಪ್ರತಿಯೊಬ್ಬ ಅಜ್ಞಾನಿ ವಿದ್ಯಾರ್ಥಿ ಬಂದು ಹತ್ತಿಸಿಕೊಂಡದ್ದು ಜ್ಞಾನಿ ಗುರುಗಳಿಗೆ ಮಾತ್ರ ಹಾಗಾಗಬೇಕು.

ಅಜ್ಜ – ಆಯ್ತು. ಹಾಗಾದ್ರೆ ಮುಂದೆ ಮಾತ್ನಾಡಣ . . . ಮೌನ.

ಆಯ್ತು ಅಂಥಾ ಜ್ಞಾನಿಗಳನ್ನ ನಾವು ಹುಡುಕೋಣ ಜೊತೆಯಾಗಿ. ಅದು ಹೆಂಗಸೂ ಆಗಿರ್ಬೋದು, ಗಂಡಸು ಆಗಿರ್ಬೋದು. ನಾವು ನಿಮ್ಮೊಟ್ಟಿಗಿದ್ದೇವೆ. ಹುಡುಕುವ ಅಂಥವರು ಎಲ್ಲಿದ್ದಾರೆ ಅಂತ್ಹೇಳಿ. ನಾವೂ ಕೂಡ ನಿಮ್ಮೊಟ್ಟಿಗೆ ಭಾಗವಹಿಸುತ್ತೇವೆ.

ಒಬ್ಬರು – ಈಗ ಹಸಿದುಕೊಂಡು ಬಂದಿದ್ದೀವಿ.

ಅಜ್ಜ – ನಮ್ಮನ್ನು ಸೇರಿಸಿಕೊಳ್ಳಿ ಅದರಲ್ಲಿ.

ಒಬ್ಬರು – ಅಲ್ಲಾಲ್ಲ.

ಅಜ್ಜ – ಆಗೋದಿಲ್ಲ. ನಮ್ಮನ್ನು ಸೇರಿಸಿಕೊಳ್ಳಿ. ಅದಾಗೋದಿಲ್ಲ. ನಮ್ಮನ್ನು ಪ್ರತ್ಯೇಕ ಅಂತ ಇಟ್ಟಕೂಡ್ಲೆ ಹೇಗಾಕ್ತದೆ ಅಂತ ಕೇಳಿದ್ರೆ . . .

ನೋಡಿ, ನೋಡುವವನು, ನೋಟ, ನೋಡಲ್ಪಡುವವನು ಒಂದೆ ಆದಾಗ ಮಾತ್ರ ಅಲ್ಲಿ . . . ಅಥವ ಧ್ಯಾನ ಮಾಡುವವ, ಮಾಡಲ್ಪಡುವವ ಮತ್ತು ಧ್ಯಾನ ಈ ಮೂರು ಒಂದೆ ಆದಾಗ ಮಾತ್ರ.

ಒಬ್ಬರು – ಆ ತ್ರಿಪುಟಿಗಳೆಲ್ಲ ಹೋಯ್ತು.

ಅಜ್ಜ – ಆ ಮೂರು ಒಂದಾಗಿ ಹೋಗ್ಬೇಕು. ಅದು ಇನ್ನು ಹೋಗ್ಲಿಲ್ಲ. ಅದೀಗ ನಾವೆಲ್ಲ ಒಂದೇ ಆದಾಗ, ಒಂದೇ ಆಗಿ ಆಮೇಲೆ ನೋಡುವ. ನಾವು ಒಂದೇ ಅಂತ್ಹೇಳಿ ಈಗ ಭಾವಿಸಿಕೊಂಡು ನೋಡಿ. ಆಮೇಲೆ ಎರಡನೆ ಹಂತ.

ಒಬ್ಬರು – ಒಂದೇ ಒಂದು ಮಾತು. ಈ ತ್ರಿಪುಟಿಯನ್ನ ಅಳಿಸಿಕೊಳ್ಳೊಕ್ಕೆ ಒಂದು ರಬ್ಬರು ಬೇಕು. ರಬ್ಬರಿನ ಹಾಗೆ ಒಬ್ರು ಗುರುಗಳಿರ್ತಾರೆ. ಅವರು ಅಳಿಸಿಹಾಕ್ಬಿಡ್ತಾರೆ. ಅವರ ಅನುಭವದಿಂದ ನಾವು ನಾವೂ ನಮ್ಮ ತಿಪುಟಿಗಳನ್ನ ಅಳಿಸಿಕೊಳ್ಳೊದು.

ಅಜ್ಜ – ನೀವು 'ನಾವು' ಅಂತ ಹೇಳುವಾಗ ನಮ್ಮನ್ನು ಬಿಟ್ಟು ಹೇಳ್ಬೇಡಿ. ನಾವು ಕೂಡ ನಿಮ್ಮ ಜೊತೆಯಲ್ಲಿ ಇದ್ದೇವೆ. ನಮ್ಮನ್ನು ಬಿಡ್ಬೇಡಿ. ಹ. ಹ. ಹ.

ಒಬ್ಬರು – ಏಕ ವಸ್ತು ಎಲ್ಲಾ ಕಡೆ ಒಂದೇ ಆಗಿರುವಾಗ.

ಅಜ್ಜ – ತತ್ವಸಿದ್ಧಾಂತವಲ್ಲ. ಈಗ ಪ್ರಕೃತ ನಮ್ಮನ್ನು ಸೇರಿಸಿಕೊಂಡು ನಾವು ಮಾತ್ನಾಡುವ ಅಂಥಾ ಜ್ಞಾನಿಗಳು ಮಹಾತ್ಮರು ಇದ್ರೆ ನಾವು ಒಟ್ಟು ಇದ್ದುಕೊಂಡು ಅವರನ್ನು ಕಂಡುಹಿಡಿಯುವ. ನಮ್ಮನ್ನು ಸೇರಿಸಿಕೊಳ್ಳಿ.

ಒಬ್ಬರು – ಆಯ್ತು. ನೀವು ಸ್ವಲ್ಪ ನಮಗೆ ಮಾರ್ಗದರ್ಶನ ಮಾಡಿಬಿಡಿ. ಆ ಏಕತ್ವದಲ್ಲಿ ನಾವೂ ಇರ್ತೀವಿ. ನಮಗೆ ಸ್ವಲ್ಪ ಮಾರ್ಗದರ್ಶನ ಮಾಡಿ. ನಾವು ಆ ಏಕತ್ವದಲ್ಲಿ ಮುಳುಗಿಕೊಂಡಿರ್ತೀವಿ. ತ್ರಿಪುಟಿಗಳನ್ನ ಅಳಿಸುವ ತನಕ ಚೇಷ್ಟೆ. ಅಳಿಸಿದ ಮೇಲೆ ಚೇಷ್ಟೆ ಇಲ್ಲ.

ಅಜ್ಜ – ಕರ್ತೃ ಸ್ಥಾನ ಬೇಕು, ಸಂಕಲ್ಪ ಬೇಕು, ಕರ್ಮ ಬೇಕು. ಮತ್ತೆ ಅದಕ್ಕೆಲ್ಲ . . . ಕರ್ತೃತ್ವವೇ ನಾಶ ಆದಮೇಲೆ ಅಲ್ಲಿ ಸಂಕಲ್ಪವಿಲ್ಲ, ಕರ್ಮವಿಲ್ಲ. ಇದೆಲ್ಲ ತತ್ವ ವಿಚಾರಗಳಲ್ಲ. ಜೀವನದಲ್ಲಿ ಅನುಸರಿಸುವಂಥಾದ್ದು.

ಒಬ್ಬರು – ಗುರು–ಶಿಷ್ಯ ಪೀಳಿಗೆ ಬಂದದ್ದೇ ಹೀಗೆ ತಾನೆ. ತಿಳಿದವ ಗುರು, ತಿಳಿಯಬೇಕಾದವ ಶಿಷ್ಯ, ತಿಳಿಸಿಕೊಟ್ಟವ ಗುರು.

ಅಜ್ಜ – ನಿಲ್ಲಿ, ನಿಲ್ಲಿ. ನಿಮ್ಮ ಮಾತೆಲ್ಲ ಕೇಳ್ತದೆ. ಆದ್ರೆ ಅದು . . . ಮಾತು ಮಾತಾಗೆ ಉಳಿಬಾರ್ದು.

ಒಬ್ಬರು – ಇಲ್ಲ ಮಾರ್ಗದರ್ಶನ ಮಾಡ್ಬೇಕು.

ಅಜ್ಜ – ಮಾರ್ಗದರ್ಶನ ಮಾಡ್ಬೇಕಾದ್ರೆ ಒಬ್ಬ ಕರ್ತೃ ಬೇಕು. ಆದ್ರೆ ಇಲ್ಲಿ ಕರ್ತೃ ಇಲ್ಲ. ಮಾತುಗಳು ಬರ್ತದೆ, ವಿಚಾರಗೆಳೆಲ್ಲ ಬರ್ತದೆ ಇಲ್ಲಿಂದ. ಯಾವುದೋ ಒಂದು ಅವ್ಯಕ್ತ ಶಕ್ತಿ ಉಂಟು. ಅದು ಇಲ್ಲಿ (ತಲೆಯನ್ನು ತೋರಿಸಿ) ಪ್ರೆಸ್ ಕೊಡ್ತದೆ. ಆಗ ವಿಚಾರಗಳು ಇಲ್ಲಿಂದ ಹೊರಗೆ ಬರ್ತದೆ. ಕರ್ತೃಸ್ಥಾನ ಇಲ್ಲ. ಇದು ನಿಮ್ಮ ಹತ್ರ ಈಗ ಹೇಳುವುದಲ್ಲ. ಎಷ್ಟು ವರ್ಷಗಳಿಂದ ಬರ್ತಾ ಇದೆ. ಈ ಮಾತುಗಳು. ೧೯೫೨ನೇ ಇಸವಿಯಿಂದ ಬರ್ತದೆ. ಕರ್ತೃ ಸ್ಥಾನ ಇದ್ರೆ ಸಂಕಲ್ಪ ಉಂಟು. ಸಂಕಲ್ಪ ಇದ್ರೆ ಕರ್ಮ ಉಂಟು. ಆದ್ರೆ ಕರ್ತೃತ್ವ ಇಲ್ಲದ ಕರ್ಮಗಳು ಆಕ್ತದೆ. ಅದಕ್ಕೆ ಫಲ ಇಲ್ಲ. ಕರ್ತೃತ್ವ ಇಲ್ಲದೆ ಈಗ ಮಾತ್ನಾಡುವಂಥಾದ್ದು. ಕರ್ತೃಸ್ಥಾನ ಇಲ್ಲ ಇಲ್ಲಿ. ಹಾಗಾದ್ರೆ ಯಾರಪ್ಪ ಮಾತ್ನಾಡೋದು.

ಒಬ್ಬರು – ವಿಭು, ಸ್ವಯಂಭೂ ಅಷ್ಟೆ. ಕರ್ತೃತ್ವ ಇಲ್ಲ ಸರಿ. ಒಪ್ಪಿಕೊಳ್ಳಬೇಕಾದ್ದೆ.

ಅಜ್ಜ – ಕರ್ತೃತ್ವ ಬೇಕಾದ್ರೆ ಮನಸ್ಸಿನ ಮೂರನೇ ಸ್ಥಿತಿಗೆ ಹೋಗಬೇಕು. ಸಂಕುಚಿತ ಭಾವನೆ, ವಿಶಾಲ ಭಾವನೆ, ಭಾವನಾತೀತ ಸ್ಥಿತಿ. ಈ ಭಾವನಾತೀತ ಸ್ಥಿತಿಗೆ ಹೋಗಬೇಕು. ಅಲ್ಲಿ ಕರ್ತೃ ಇಲ್ಲ.

ಒಬ್ಬರು – ಎಲ್ಲಿ ಮನಸ್ಸಿನ ಭಾವನೆಗಳೇ ಏಳೊಲ್ವೋ, ಅಂಥ ಶಾಂತಿ ಸ್ಥಿತಿ ಬರ್ಬೇಕು.

ಅಜ್ಜ – ಅದು ಅಲ್ಲಲ್ಲೇ ಅಲ್ಲಲ್ಲೇ ಅವರವರಲ್ಲಿ ಉದಯ ಆಗ್ಬೇಕು.

ಒಬ್ಬರು – ಒಂದು ಸಣ್ಣ ಪ್ರಶ್ನೆ. ಗುರುವಿನ ಬಳಿಗೆ ಶಿಷ್ಯ ಬಂದಾಗ, ಅವನು ಮಾಡುವ ಕ್ರಮಗಳು ಹೇಗೆ.

ಅಜ್ಜ – ಯಾರು ಗುರು.

ಒಬ್ಬರು – ಯಾವನು ಆತ್ಮದಲ್ಲಿ ನೆಲೆಯಾಗಿ ನಿಂತಿದ್ದಾನೋ ಅವನೇ ಗುರು.

ಅಜ್ಜ – ಆ ಗುರು ಎಲ್ಲಿದ್ದಾನೆ?

ಒಬ್ಬರು – ಅವನು ಎಲ್ಲೆಲ್ಲೂ ಸರ್ವವ್ಯಾಪಿಯಾಗಿದ್ದಾನೆ.

ಅಜ್ಜ – ಸರ್ವವ್ಯಾಪಿಯಾಗಿದ್ದ ಮೇಲೆ ಪ್ರತಿಯೊಂದು ದೇಹದಲ್ಲಿ ಇದ್ದಾನೆ.

ಒಬ್ಬರು – ಇದ್ದಾನೆ. ಆದ್ರೆ ಅನುಭವಕ್ಕೆ ಬಾರದೇ ಇರೋದ್ರಿಂದ ಅಡ್ಡಿ ಇರೋದ್ರಿಂದ ನಿವಾರಣೆಗೋಸ್ಕರ ಬರ್ತೇವೆ.

ಅಜ್ಜ – ಹಾಗೆ ಬರ್ಬೇಕಾದ್ರೂ, ಈ ಬಾಹ್ಯವಿಚಾರದಲ್ಲಿ ಮನಸ್ಸುಂಟಲ್ಲ, ಇದೇ ಮನಸ್ಸನ್ನು ಅಂತರ್ಮುಖ ಮಾಡಿದಾಗ ಅಲ್ಲಿಯೇ ಸಿಕ್ತದೆ. ಪ್ರಾಮುಖ್ಯ ಅದು. ಫೌಂಡೇಷನ್ ಕಲ್ಲಿಡದೆ ಇದ್ರೆ ಯಾವ ಬಿಲ್ಡಿಂಗ್ ಕಟ್ಟಿದ್ರೂ ಅದು ನಿಲ್ಲೋದಿಲ್ಲ. ಈಗ ಒಂದು ಬಿಲ್ಡಿಂಗ್ ನಿಲ್ಲಬೇಕಾದ್ರೆ ಫೌಂಡೇಷನ್ ಬೇಕು. ಫೌಂಡೇಷನ್ ಎಲ್ಲಿ ಉಂಟು. ಆಂ. ಎಲ್ಲ ಅವರವರಲ್ಲಿ ಆಗ್ಬೇಕು. ಆಗ ಅವನಿಗೆ ಸಂಪೂರ್ಣ ಅಧಿಕಾರ ಬರ್ತದೆ. ಪ್ರತಿಯೊಬ್ಬ ಜೀವಾತ್ಮನಿಗೂ ಅವ ಕೊಟ್ಟು ಕಳಿಸಿದ್ದಾನೆ. ಅದನ್ನ ನಾವು ಉಪಯೋಗ ಮಾಡಿಕೊಳ್ಳುವಂಥಾದ್ದು ನಮ್ಮ ಕೈಯಲ್ಲುಂಟು. ಆಮೇಲೆ ಆ ಅರ್ಹತೆಯನ್ನು ಪಡೆದಾದ ಮೇಲೆ ಆ ಗುರು ಸಿಕ್ತನೆ. ಎಲ್ಲವೂ ಒಳಗಿನಿಂದ್ಲೇ ಆಕ್ತದೆ. ನಮ್ಮ ಸಿದ್ಧಾಂತ ಹಾಗೆ. ಹೊರಗಿನಿಂದ ಬಾಹ್ಯ ಗುರು ಸಿಕ್ಕಬಹುದು. ಎಲ್ಲಿ, ಇವ ಅರ್ಧದಾರಿಗೆ ಮುಟ್ಟಬೇಕು. ಅಲ್ಲಿ. ಇವ ಎಲ್ಲಿ ಹೋಗೋದು ಅಂತ ನೋಡುವಾಗ ಒಬ್ಬ ಬರ್ತನೆ. ಅವ ಗುರು. ಗುರು ಇದ್ದಲ್ಲಿಗೆ ನಾವು ಹೋಗೋದಲ್ಲಪ್ಪ. ನಾವಿದ್ದಲ್ಲಿಗೆ ಗುರು ಬರ್ಬೇಕು. ನಾವು ನಮ್ಮ ದಾರಿಯಲ್ಲಿ ಮೊದ್ಲು ಹೋಗ್ಬೇಕು. ಆಗ ಅವ ಅಲ್ಲಿಗೆ ಬರ್ತನೆ. ಗುರುವಿನಲ್ಲಿಗೆ . . . ಉಹೂ ಅವನನ್ನು ಹುಡುಕಿಕೊಂಡು ಹೋಗೋದಲ್ಲ. ನಮ್ಮ ಸಿದ್ಧಾಂತ ಹಾಗೆ. ಭಕ್ತ ಇದ್ದಲ್ಲಿಗೆ ಭಗವಂತ ಬರ್ತಾನಂತೆ. ಭಕ್ತನು ಭಗವಂತನಲ್ಲಿಗೆ ಹೋಗ್ಲಿಕ್ಕೆ, ಅವ ಎಲ್ಲಿದ್ದಾನೆ ಅಂತ್ಹೇಳಿ ಹುಡ್ಕೋದು. ನೋಡಿ ಇವ ಇದ್ದಲ್ಲಿಗೆ ಅವ ಬರ್ಬೇಕು. ಹಾಗೆ ನಾವು ಅರ್ಧ ದಾರಿಗೆ ಹೋಗುವಾಗ ನಮ್ಗೆ ಗುರು ಅಲ್ಲಿ ಸಿಕ್ತಾನೆ. ಹೋಗುವ ದಾರಿಯಲ್ಲಿ ಸಿಕ್ತಾನೆ. ನಾವು ಒಟ್ಟು ಇದ್ದೀಗ, ಒಟ್ಟಾಗಿ ವಿಚಾರ ಮಾಡುವ. ನಾವು ಪ್ರತ್ಯೇಕ ಅಂತ್ಹೇಳಿದ್ರೆ ನಿಮಗೆ ಉತ್ತರ ಸಿಕ್ಕೋದಿಲ್ಲ. ನಾವು ಒಟ್ಟಿಗೆ ಇದ್ದ ಕಾರಣ, ಆ ಭಾವನೆ ಇದ್ರೆ ಮಾತ್ರ ಇಲ್ಲಿಂದ ಮಾತುಗಳು ಮರ್ತದೆ. ಇಲ್ಲದಿದ್ರೆ ಬರೋದಿಲ್ಲ.

ಒಬ್ಬರು – ಒಂದು ಪ್ರಶ್ನೆ. ಆಕಾಶವು ಅನಂತವಾದ್ದು.

ಅಜ್ಜ – ನಿಲ್ಲಿ, ನಿಲ್ಲಿ. ಸ್ವಲ್ಪ ನಿಧಾನ ಅಪ್ಪ, ಅವಸರ ಬೇಡ. ಗಡಿಬಿಡಿ ಮಾಡ್ಬೇಡಿ. ಹೇಳ್ತದೆ. ಇಲ್ಲಿ ಕರ್ತೃ ಸ್ಥಾನ ಇಲ್ಲ ಅಂತ ಹೇಳಿಯಾಯ್ತು.

ಒಬ್ಬರು – ಹೌದು, ಕರ್ತೃತ್ವ ಇಲ್ಲ. ಸರಿಯೆ. ಬ್ರಹ್ಮಕ್ಕೆ ಕರ್ತೃತ್ವ ಎಲ್ಲಿ ತರೋಣ.

ಅಜ್ಜ – ಆ ತತ್ವ ಸಿದ್ಧಾಂತಗಳು ನಮಗೆ ಬ್ಯಾಡ.

ಒಬ್ಬರು – ಆದ್ರೆ ಒಂದು ಗುರು ಸನ್ನಿಧಿ ಅಂತ ಒಂದುಂಟು. ಆ ಸನ್ನಿಧಿಯಿಂದ ಉದ್ಧಾರವಾದ ಶಿಷ್ಯರೂ ಇದ್ದಾರೆ.

ಅಜ್ಜ – ಇರ್ಲಿಕ್ಕೂ ಸಾಕು. ಇರಬಹುದು. ಹ. ಹ. ಹ. (ಎಲ್ಲರ ನಗು) ನಾವು ಒಟ್ಟು ಸಾಮೂಹಿಕವಾಗಿದ್ದು ಆಂಥಾದ್ದೊಂದಕ್ಕೆ ನಾವು ದಾರಿ ಕಂಡುಹಿಡಿಯುವ ಅಂತ್ಹೇಳಿ. ಇದನ್ನ ಪ್ರತ್ಯೇಕ ಅಂತ ಹೇಳಿಬಿಟ್ರೆ ಆಗೋದಿಲ್ಲ.

ಒಬ್ಬರು – ಕೋಟಿ ತಾಯಂದಿರಿಗಿಂತ ಒಬ್ಬ ಆತ್ಮಜ್ಞಾನಿ ಮೇಲು.

ಅಜ್ಜ – ನಿಮ್ಮ ಎಲ್ಲಾ ತತ್ವ ಸಿದ್ಧಾಂತಗಳನ್ನು ಒಪ್ಪತಕ್ಕದ್ದೆ. ಆದ್ರೆ . . .

ಒಬ್ಬರು – ಈ ಹೃದಯದಲ್ಲಿ ಅಚ್ಚಳಿಸತಕ್ಕಂಥ ಒಂದು ವಿಶ್ವಾಸ ಬರ್ಲಿ.

ಅಜ್ಜ – ಅದು ಎಲ್ಲಿಂದ ಬರ್ಬೇಕು.

ಒಬ್ಬರು – ತಮ್ಮಿಂದ.

ಅಜ್ಜ – ಅಲ್ಲ ಅದು ನಿಮ್ಮ ಒಳಗಿಂದ್ಲೇ ಬರ್ಬೇಕು. ಆ ಒಳಗಿಂದ ಬರ್ಬೇಕಾದ್ರೆ ಅವ ಏನು ಮಾಡ್ಬೇಕು ಹಾಗಾದ್ರೆ ಅದು ಪ್ರಶ್ನೆ.

ಒಬ್ಬರು – ಒಂದು ಸತ್ಯ ಸಂಕಲ್ಪ ಸ್ವಾಮಿ. ಒಂದೇ ಒಂದು ಸಂಕಲ್ಪ ನೀವು ಮಾಡಿಬಿಟ್ರೆ,

ಅಜ್ಜ – ಆದ್ರೆ ಅದು ಎಲ್ಲಿಂದ ಬರ್ಬೇಕು.

ಒಬ್ಬರು – ಜೇಬಿನಲ್ಲಿ ಹಣ ಇದೆ. ಯಾರಾದ್ರೂ ಕೇಳಿದ್ರೆ ಅಂತ ಭಯ ಪಡೋದು ಬೇಕಾಗಿಲ್ಲ. ಕೊಡಿ. ಅದೂ ಹೊಟ್ಟೆ ತುಂಬಿಕೊಳ್ಳಲಿ ಪಾಪ. ನಿಮ್ಮ ಜೇಬಿನಲ್ಲಿ ಬ್ರಹ್ಮಜ್ಞಾನ ಎಂಬ ಹಣವಿದೆ. ಆ ಹಣವನ್ನು ನಮಗೂ ಸ್ವಲ್ಪ ಬಡಿಸಿ, ಸಾಕು.

ಅಜ್ಜ – ನೀವು ಹಾಗೆ ಹೇಳೋದಾದ್ರೆ, ಛೆ ನಾವು ಹೇಳ್ತದೆ. ಅದು ತಕ್ಕೊಳ್ಳುವವರ ಕೈಯಲ್ಲುಂಟು. ನಮ್ಮ ಕೈಯಲ್ಲಿಲ್ಲ. ನಮ್ಮದಾ ಅದು ಕೊಡ್ಲಿಕ್ಕೆ. ಅಂಥಾದ್ದೊಂದು ಉಂಟು ಅಂತ ನಮಗ್ಗೊತ್ತಿಲ್ಲ. ನಿಮಗೆ ಹಾಗೆ ಕಂಡ್ರೆ ನೀವು ತೊಗೊಳ್ಳಿ. ತೊಗೊಳ್ಳುವವನ ಕೆಲಸ. ನಾವು ಕೊಡ್ಲಿಕ್ಕೆ ನಮ್ಮದೋ ಅದು. ಅಥವ ನಾವು ಇದ್ರೆ ನಮ್ಮದು ಅಂತ ಹೇಳಬಹುದು. ‘ನಾವು’ವೇ ಇಲ್ಲ. ಅದು ಯಾರದ್ದು ಸ್ವತ್ತು ಅದು.

ಒಬ್ಬರು – ಗುರುವಿನ ಸಂಪತ್ತು ಶಿಷ್ಯನ ಸಂಪತ್ತು.

ಅಜ್ಜ – ಏನು ಗುರು ಅಂದ್ರೆ? (ಗಡ್ಡಿನಲ್ಲಿ) ಗುರು ಎಂಥದ್ದು, ಎಲ್ಲ ತತ್ವ ಸಿದ್ಧಾಂತಗಳೇ ಆಯ್ತಲ್ಲಪ್ಪಾ. ಸರಿ.

ಒಬ್ಬರು – ಆಯ್ತು, ಗುರು ಅಂದ್ರೆ ಸಾಕ್ಷಿಯೇ ಇದು ಬಿಟ್ಟು ಬೇರೆ ಮಾತಿಲ್ಲ.

ಅಜ್ಜ – ಅವ ಎಲ್ಲಿದ್ದಾನೆ? ಪ್ರತಿಯೊಂದು ದೇಹದಲ್ಲಿದ್ದಾನೆ. ಅದನ್ನು ಅವರವರೇ ಕಂಡುಕೊಳ್ಳುವಂಥ ವಿಧಾನ ಬೇಕಾದ್ರೆ, ಈ ಬಾಹ್ಯ ವಿಚಾರದಲ್ಲಿರುವ ಮನಸ್ಸನ್ನು ಬುದ್ಧಿಯ ಮೂಲಕ ಒಳಗಿರುವ ಶಕ್ತಿಯಲ್ಲಿ ಕೇಂದ್ರೀಕರಿಸಿದಾಗ, ಅದು ತನ್ನಿಂದ ತಾನೆ ಇಳಿತದೆ. ಇದಕ್ಕೆ ಸಾಧನೆ ಬೇಡ. ಇಲ್ಲದೇ ಇದ್ದದ್ದನ್ನು ಪಡೀಲಿಕ್ಕೆ ನಮಗೆ ಸಾಧನೆ ಬೇಕು. ಇದ್ದದ್ದನ್ನು ಪಡೀಲಿಕ್ಕೆ ಬರೀ ನೋಟ ಸಾಕು. ಒಂದು ನೋಟ ಅಂತ ಹೇಳ್ತದೆ. ಅಲ್ಲಿ ಅವ ನೋಡುವವನಿದ್ದಾನೆ. ಆ ನೋಟ ನೋಡಲ್ಪಡುವವನೂ ಇದ್ದಾನೆ. ಅದು ಒಂದೇ ಆಗಿ ನಾಶ ಆಗಿಬಿಟ್ರೆ ಮುಗೀತು. ಇದು ಕೃತಿಗಿಳಿದಾಗ ಬರುವಂಥಾ ವಿಚಾರಗಳು. ಬೇರೆ ಏನೂ ಇಲ್ಲ.

ಒಬ್ಬರು – ಸರಿ.

ಮತ್ತೊಬ್ಬರು – ಹಾಗಿದ್ರೆ ಒಂದು ಟಚ್ ಮಾಡಿಬಿಟ್ರೆ, ಯಾರು ಬ್ರಹ್ಮತ್ವವನ್ನು ಪಡಕೊಂಡಿದ್ದಾರೋ ಅವ್ರು ಒಂದು ಟಚ್ ಮಾಡಿಬಿಟ್ರೆ ಅದ್ರಿಂದ್ಲೂ ಸಹ ಬ್ರಹ್ಮತ್ವಕ್ಕೆ ಹೋಕ್ತಾರೆ ಅಂತ ಹೇಳ್ತಾರಲ್ಲ.

ಅಜ್ಜ – ಹೌದಾ, ನಾವೂ ಕೂಡ ಹಾಗೆ ಹೇಳ್ತದೆ. ಅಂಥವರು ನಮಗೆ ಒದಗಿ ಬರ್ಲಿ ಅಂತ ನಮಗೂ ಕೂಡ ಉಂಟು.

ಒಬ್ಬರು – ಒಂದು ಸತಿ ನಮಗೆ ಆ ಟಚ್ ಮಾಡಿ, ಸ್ವಾಮಿ.

ಅಜ್ಜ – ನಾವು ಈಗ ಆ ವಿಚಾರವನ್ನು ಸ್ವಲ್ಪ ಕಮ್ಮಿ ಮಾಡುವ. ಬೇರೊಂದು ವಿಚಾರ ಮಾತ್ನಾಡುವ. ಸಂಪೂರ್ಣ ಒಂದು ವ್ಯಕ್ತಿಯನ್ನು ಬೇರೆ ಇಟ್ಟು ಮಾತ್ನಾಡುವಂಥ ವಿಚಾರ ಬರ್ತದೆ ನಿಮ್ಮಿಂದ. ಅದಾಗೋದಿಲ್ಲ. ನಾವು ಸಾಮೂಹಿಕವಾಗಿ ಮಾತ್ನಾಡುವ. ಗುರುಃ ಬ್ರಹ್ಮ ಗುರುಃ ವಿಷ್ಣುಃ . . . ಅಂತ ಹೇಳ್ತೀರಲ್ಲ. ಗುರು ಯಾರು?

ಒಬ್ಬರು – ಆತ್ಮವೇ ಗುರು.

ಅಜ್ಜ – ಅಲ್ಲ.

ಒಬ್ಬರು – ನಾಮರೂಪ ತೆಗೊಂಡು ಹೇಳಿದ್ರೆ ದಕ್ಷಿಣಾಮೂರ್ತಿಯೇ ಗುರು ಅಂತ ಹೇಳ್ತೀವೆ. ನಾಮರೂಪ ಬಿಟ್ರೆ ಆತ್ಮವೇ ಗುರು ಅಂತ ಹೇಳ್ತೀವೆ.

ಅಜ್ಜ – ಯಾರು ಹೇಳೋದ್ವಾಗೆ.

ಒಬ್ಬರು – ಬ್ರಹ್ಮವನ್ನು ಬಲ್ಲವರು ಹೇಳಿಕೊಟ್ಟ ಮಾತು.

ಅಜ್ಜ – ಈಗ ನಾವು ಏನು ಹೇಳ್ತದೆ.

ಒಬ್ಬರು – ಆತ್ಮವೇ ಗುರು ಅಂತ ತಿಳಿಯೋತನಕ, ಹೊರಗೆ ಒಬ್ಬ ಗುರು ಬೇಕಾಗಿದೆ, ತಮ್ಮಂಥವರು.

ಅಜ್ಜ – ಹೇಳಿ ಕೊಟ್ಟವರು ಒಬ್ರಿದ್ದಾರಲ್ಲ.

ಒಬ್ಬರು – ಅವರೂ ಬ್ರಹ್ಮವನ್ನು ಬಲ್ಲವರೆ.

ಅಜ್ಜ – ಹೌದು ಈಗೇನಾಗ್ಬೇಕು. ಹೇಳಿದ್ದಾರಲ್ಲ.

ಒಬ್ಬರು – ನಮಗೆ ಅನುಭವ ಬೇಕು. ಅನುಭವಕ್ಕೋಸ್ಕರ ಬಂದಿದ್ದೇವೆ.

ಅಜ್ಜ – ಅಲ್ಲಾ ನೀವು ಏನು ಪಡೆದಿದ್ದೀರಿ ಅದು ಬರ್ಲಿಲ್ವಾ.

ಒಬ್ಬರು – ಶಾಸ್ತ್ರ ಗ್ರಂಥದ ಮಾತುಗಳೇ ಬೇರೆ, ಅನುಭವವೇ ಬೇರೆ. ಶಾಸ್ತ್ರದಲ್ಲಿ ಕೊಟ್ಟಿದ್ದಾರೆ ಏನಂತ? ಇಂಥವರನ್ನ ಹುಡುಕ್ಕೊಂಡು ಹೋಗಿ ಅಂತ.

ಅಜ್ಜ – ಹಾಗೆ ಹೇಳಿದ ನಿಮ್ಮ ಗುರುಗಳಿದ್ದಾರಾ ಈಗ.

ಒಬ್ಬರು – ಹೇಳಿದವರು ದೊಡ್ಡವರು ಬ್ರಹ್ಮನಲ್ಲಿ ಒಂದಾದ್ರು. ನಾವು ಬ್ರಹ್ಮನಲ್ಲಿ ಒಂದಾಗ್ಬೇಕಲ್ಲಾ. ಈಗ ಅದಕ್ಕಾಗಿ ಬ್ರಹ್ಮನಲ್ಲಿ ಒಂದಾಗಿದ್ದವರಲ್ಲಿಗೆ ಬಂದಿದೀವಿ.

ಅಜ್ಜ – ಅದೆಲ್ಲ ಆಗೋದಿಲ್ಲ. ಅದನ್ನೆಲ್ಲ ಮಾತಿನಲ್ಲಿ ಮಾಲಿಸಿಬಿಡ್ತೀರಪ್ಪ. ಹ. ಹ. ಹ. ಏನಪ್ಪ ಏನು? ಏನು. ಅದೊಂದು ಇಲ್ಲಿ ಹಿಡಿಯೋದಿಲ್ಲ.

ಒಬ್ಬರು – ನಮಗೆ ಕಷ್ಟ ಬಂದದ್ದೇನೆ. ಆ ಒಂದ್ರಲ್ಲೇ ನೆಟ್ಟಗೆ ನಿಲ್ಲಬೇಕೂಂತ. ಅದಕ್ಕೆ ಒಬ್ಬರ ಒಂದು ಕೃಪಾದೃಷ್ಟಿ ನಮ್ಮ ಮೇಲೆ ಬೀಳಲೀ ಅಂತ ಅಷ್ಟೆ ಆಸೆ.

ಅಜ್ಜ – ಆ ಒಬ್ಬ ಅವ ಪರಮಾತ್ಮ ಅವ ನೋಡ್ತಾ ಇದ್ದಾನೆ. ಈ ಮನಸ್ಸು ಇದರಲ್ಲೇ ಇರುವಾಗ, ಇದುವೇ ನಾನು ಅಂತ ಇರುವಂಥಾದ್ದು. ಇದುವೇ ನಾನು ಅಂತ ಇರುವಾಗ, ಆಚೆದಕ್ಕೆ ಹೋಗ್ಲಿಕ್ಕೆ . . . ಇದನ್ನ ಸ್ವಲ್ಪ ಸಡಿಲ ಮಾಡಿದ್ರೆ ಆಚೆದಕ್ಕೆ ಹೋಕ್ತದೆ. ಎಲ್ಲ ಮನಸ್ಸಿನ ಒಳಗೆ ಕೆಲಸ ಆಗ್ಬೇಕು, ಅಷ್ಟೆ. ಬೇರೆ ಏನೂ ಇಲ್ಲ. ಉಪದೇಶ ಮಾಡ್ಲಿಕ್ಕೆ ಅವ ಯಾರು? ಅಂತ ಕೇಳ್ತದೆ. ಆ ಉಪದೇಶ ಮಾಡುವವರು ನಮಗೆ ಮೊತ್ತ ಕಾಣಬೇಕು. ಮುಖ ಭೇಟಿ ಆದಾಗ ನಮ್ಗೆ ಅಲ್ಲಿ ಸಂಭಾಷಣೆ ಪ್ರಾರಂಭ. ನಮ್ದು ಉಪದೇಶ ಒಬ್ಬ ಕೊಡ್ತಾನೆ. ಯಾರವ? ಏನು ಉಪದೇಶ, ಆ್ಞಂ. ಏನು ಉಪದೇಶ ಕೊಡ್ತಾನೆ ಅವ. ಆ್ಞಂ. ಎಲ್ಲಿ ಇವನಲ್ಲೇ ಆಗಬೇಕು. ಇವನ ಮನಸ್ಸು ಪರಿವರ್ತನೆ ಆಗದೆ ಶಿವಾಯ್ ಯಾವ ಉಪದೇಶಗಳೂ ನಿಲ್ಲೋದಿಲ್ಲ. ಆಯ್ತು. ಸಾಕು.

*****

24-04-2000

ಮಂಜು ಮನೆ, ಬೆಂಗಳೂರು. ಬೆಳಗೆರೆ ಕೃಷ್ಣಶಾಸ್ತ್ರಿಗಳೊಡನೆ.

ಅಜ್ಜ – ಇದು ಮನಸ್ಸು ಬುದ್ಧಿಗೆ ಎಟುಕೋದಿಲ್ಲ. ಇದನ್ನು ಹ್ಯಾಗೆ ವರ್ಣನೆ ಮಾಡೋದು. ಅವರು ಹೇಳಿದ್ದು (ಕೃಷ್ಣ ಶಾಸ್ತ್ರಿ) ಬಹಳ ಪ್ರಾಧಾನ್ಯ ಕಾಣ್ತದೆ. ಮನಸ್ಸು ಬುದ್ಧಿಗೆ ಅತೀತವಾದದ್ದಲ್ವ. ಅದು ನಮ್ಮ ಸಹಜಾವಸ್ಥೆ. ಅದನ್ನು ಹ್ಯಾಗೆ ವರ್ಣನೆ ಕೊಡೋದು.

ಶಾಸ್ತ್ರಿಗಳು – ಅದು ಆಚೆಗಿನದ್ದಲ್ವಾ ಅದು.

ಅಜ್ಜ – ಹೌದು ಎಲ್ಲಾ ವಿಚಾರಗಳನ್ನು ವರ್ಣನೆ ಮಾಡಿ ಕೊಡಬಹುದು, ಹೇಳ್ಬಹುದು. ತತ್ವಸಿದ್ಧಾಂತಗಳನ್ನೆಲ್ಲ ಹೇಳ್ಬಹುದು. ಸಹಜಾವಸ್ಥೆಯನ್ನು ಹೇಳೋದ್ಹೇಗೆ. ಅದನ್ನು ಅಂತರ್ದೃಷ್ಟಿಯಿಂದ ಅವರವರೇ ಕಾಣಬೇಕು. ಲೋಕದಲ್ಲಿ ಎರಡುಂಟಲ್ಲ. ಎರಡು ರೀತಿಯ ಜನ, ಏನು? ಒಂದು ದೇಹವೇ ತಾನು ಅಂತ ಹೇಳುವ ಜನಾಂಗ.

ಒಬ್ಬರು – ಸಾಮಾನ್ಯ.

ಅಜ್ಜ – ಸಾಮಾನ್ಯ ಆಗೋದಿಲ್ಲ ನಮ್ಗೆ. ಜನಾಂಗ ಇನ್ನೊಂದು ದೇಹದಲ್ಲಿರುವವನು ನಾನು, ಅಂತ ಹೇಳುವ ಒಂದು ಜನಾಂಗ ಉಂಟು, ಅಲ್ವಾ.

ಶಾಸ್ತ್ರಿಗಳು – ಇದೆರಡನ್ನೂ ಹೇಳದೇ ಇರುವ ಒಂದು ಸಂದರ್ಭ ಉಂಟು.

ಅಜ್ಜ – ಹೌದು. ಹೇಳ್ಬೇಕಾದ್ರೆ ನಾನು ಒಂದು ವ್ಯಕ್ತಿ ಆಗ್ಬೇಕು. ಅದಿಲ್ಲವಾದ್ರೆ ಒಂದು ಶಕ್ತಿ ಆಗ್ಬೇಕು. ನಾನು ಒಂದು ವ್ಯಕ್ತಿಯೂ ಅಲ್ಲ, ಒಂದು ಶಕ್ತಿಯೂ ಅಲ್ಲ, ಅಂತ ಹೇಳುವಾಗ ಇದನ್ನ ಹ್ಯಾಗೆ ಹೇಳೋದು. ಆ ನಾನುವಿಗೆ ಅಸ್ತಿತ್ವವೇ ಇಲ್ಲ ಅಲ್ಲಿ. ಹೇಳ್ಬೇಕಾದ್ರೆ ಒಂದು ಅಸ್ತಿತ್ವ ಬೇಕಲ್ಲ. ಆ್ಞಂ. ನಾನು ಎಂಬುದು ಎರಡಕ್ಷರದ ಒಂದು ಶಬ್ದ. ನಾನು ಯಾರು? ನಾನು ಯಾವುದೂ ಅಲ್ಲ. ಮುಗೀತು. 'ನಾನು' ಯಾವುದೂ ಅಲ್ಲ.

ಒಬ್ಬರು – ಅದು ಅನುಭವದಲ್ಲಿಲ್ಲದಿರುವಾಗ ಅದನ್ನು ಅನುಭವದಲ್ಲಿ ನಿಲ್ಲಿಸ್ಬೇಕು.

ಅಜ್ಜ – ಹೌದು ಅಲ್ಲಿ ಹೊಂದಾಣಿಕೆ ಬರ್ಬೇಕಲ್ಲಪ್ಪ. ಹೊಂದಾಣಿಕೆ ಬರ್ಬೇಕು. ಹೊಂದಾಣಿಕೆ ಬರೋದು ಹ್ಯಾಗೆ. ಭಜನೆ ಮಾಡಿ ಸಾಕು.

ಆರತಿ – 'ಹಂಸಾ ನಿನ್ನಲ್ಲಿ ನೀ ನೋಡು' ಭಜನೆ ಮಾಡಿದಳು.

ಮುಂದುವರೆದಿದೆ.